Reg. No. M. 1550

KODAGU

8—5—1936

IF NOT

delivered

please return to

"KODAGU"

OFFICE,

MERCARA.

ಕೊಡಗು

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಅಚ್ಚುಮೆಚ್ಚಿನ
ಮುದ್ರಣ ಕಲಸಕ್ಕೆ
"ಕೊಡಗು"
ರಸ್ತೆ
ಮಡಿಕೇರಿ.

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ವಾರ್ಷಿಕ ಚಂದಾ ರೂ. ೩—೪—೦.

ಸಂಪಾದಕ—ಸಂಪ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೮—೫—೧೯೩೬ [ಸಂಚಿಕೆ ೪೮

Telephon;
3145

By Appointment
To H. E The Governor of Madras.

Telegrams:
'PRECIOUS.'



V. SUBRAMANIA IYER.

Jeweller, & Diamond Merchant,

52—24 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.

Catalogue & special designs with quotations (free) on enqu ry

BANKING FACILITIES OF EVERY DESCRIPTION.

Head office—UDIPI.

BRANCHES:—
1. Madras,
2 Coondapoor.
3 Car Street, Mangalore.
4. Bunder, Mangalore.
5 Shimoga.
6. Udipi
7. Mercara.
8. Virarajendrapet.

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3 69,986.

BANKERS AT—
1. Bombay.
2. Calcutta.
3. Karachi.
4. Bangalore.
5 Mysore.
6 Calicut.
7. Cannanore.
8 Cochin, and other important places.

To those thinking of investments the following figures should strongly appeal

Capital: Anthorised, issued and subscribed—Rs. 3,50,000.
Paid up Rs. 2,87,435.
Deposits—Rs. 27,99,323. Working Capital—Rs. 35,66,707.

The Canara Banking Corporation Udipi Limited.

52—25 Estd. 1906.

ಜನರಲ್
ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್.
(ಸ್ಥಾಪಿತವಾದದ್ದು 1907 ರಲ್ಲಿ)
ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲಿ
ಕೊಡುತ್ತದೆ.
ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%
ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%
ಪಾಲಿಸಿಯ ಶರತ್ತುಗಳು ಅತೀ ಸುಲಭ
ಅಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿವೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು
ಉತ್ಸಾಹವಂತರಿಗೆ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಎ. ಜಿ. ಫಾಗರ್ಸನ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೇನೇಜರ್. ದಿ ಜನರಲ್ ಅಷ್ಯೂರೆನ್ಸ್
ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ—
ಎ. ಎಫ್ ಎಸ್ ಅಯ್ಯಂಗಾರ್.
ಸುಪರಿಂಟಿಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್,
ಚಾನುರಾಜಪೇಟೆ, 3ನೇ ರೋಡ್
52—47 ಬೆಂಗಳೂರು

ವಿವಿಧ ವಾರ್ತಾವಳಿ.

ಕುಂಟನ ಆಸ್ತಿ.

ತುರ್ಕಸ್ತಾನದ ಕಾನ್‌ಸ್ಟಾಂಟಿನೋಪಲ್‌ಶಹರದಲ್ಲಿ ಕಾಲು ಕುಂಟನಾಗಿದ್ದ ಭಿಕ್ಷುಕನೊಬ್ಬನು ಸತ್ತ. ಆತನ ಊರು ಗೋಲಿನ ಮಧ್ಯದಲ್ಲಿ 106 ಪವನು ಬೆಲೆಯ ಚಿನ್ನದ ತುಂಡುಗಳು ದೊರೆತವು.

—೦೦೦—

ಕಲ್ಕತ್ತದ ಹೊಸ ಮೇಯರರು.

ಸರ್ ಹರಿಶಂಕರ ಪಾಲರೂ, ಮಿ. ಆಬ್ದುರ್‌ರಹೀಮರೂ ಕ್ರಮವಾಗಿ ಕಲ್ಕತ್ತ ನಗರ ಸಭೆಯ ಮೇಯರ್ ಮತ್ತು ಡೆಪ್ಯುಟಿ ಮೇಯರರಾಗಿ ಚುನಾಯಿಸಲ್ಪಟ್ಟಿರುವರು.

—೦೦೦—

ಮಹಾತ್ಮ ಗಾಂಧಿಯವರ ಆಶ್ರಮ:—

ವಾರ್ಧದಿಂದ 5 ಮೈಲು ದೂರದಲ್ಲಿರುವ ಸೇಗಾಂವ ಎಂಬ ಗ್ರಾಮದಲ್ಲಿ ಮಹಾತ್ಮರು ತಮ್ಮ ಶಾಶ್ವತವಾದ ವಾಸಸ್ಥಳವನ್ನು ಏರ್ಪಡಿಸುವರೆಂದು ತಿಳಿಯುಬಂದಿದೆ.

—೦೦೦—

ಗುಪ್ತ ದಾನ.

ಕಾಂಗ್ರೆಸ್ ಅಂತರ ರಾಷ್ಟ್ರೀಯತೆಯ ಪ್ರಚಾರ ಕಾರ್ಯಕ್ಕಾಗಿ ಯಾರೋ ಒಬ್ಬರು ಮಹನೀಯರು ತಮ್ಮ ಹೆಸರನ್ನು ಕೊಡದೆ 10,000 ರೂ. ಗಳನ್ನು ಪಂ. ಜವಹರಲಾಲರ ಹಸ್ತಕ್ಕೆ ಸಮರ್ಪಿಸಿರುವರೆಂದು ತಿಳಿದುಬರುತ್ತದೆ

—೦೦೦—

ಮದ್ರಾಸು ಆಧಿಪತ್ಯದಿಂದ ಕೌನ್ಸಿಲ್ ಆಫ್ ಸ್ಟೇಟಿಗೆ ಉಮೇದ್ವಾರರು.

ಶ್ರೀ. ಗಳಾದ ಎ. ಸಿ. ವಿಲ್ಲಿಂಗಿರಿ ಗೌಂಡರ್, ಎ. ರಾಮದಾಸ ಪಂತಲು ಮತ್ತು ನಾರಾಯಣದಾಸ್ ಗಿರಿಧರದಾಸ್ ಈ ಮೂರು ಮಂದಿಯನ್ನು ಕೌನ್ಸಿಲ್ ಆಫ್ ಸ್ಟೇಟಿನ ಉಮೇದ್ವಾರರಾಗಿ ಕಾಂಗ್ರೆಸ್ ಪಕ್ಷದವರು ಆರಿಸಿದ್ದಾರೆ.

—೦೦೦—

ಸರ್. ಕೆ. ವಿ. ರೆಡ್ಡಿಯವರಿಗೆ ಗವರ್ನರ್ ಪದವಿ.

ಮದರಾಸು ಗವರ್ನರರಾದ ಮೂನ್ಯ ಲಾರ್ಡ್ ಎರ್ಸ್‌ಕೈನ್‌ರವರು 4 ತಿಂಗಳ ರಜೆಮೇಲೆ ಸ್ವದೇಶಕ್ಕೆ ಹೋಗುವದರಿಂದ ಅವರ ಒದಲಿಗೆ ಆ ಅವಧಿಯಲ್ಲಿ ಲಾ ಮೆಂಬರರಾಗಿದ್ದ ಸರ್ ಕೆ. ವಿ. ರೆಡ್ಡಿಯವರು ಮದ್ರಾಸಿನ ಗವರ್ನರಾಗಿ ನೇಮಿಸಲ್ಪಟ್ಟಿರುವರು.

—೦೦೦—

ಮೌಲಾನಾ ಶೌಕತಲ್ಲಿಯವರ ಮೇಲೆ ದಾವೆ.

1935 ನೇ ಇಸ್ವಿಯಲ್ಲಿ ಆಸೆಂಬ್ಲಿಯ ಅಧಿವೇಶನವು ನಡೆದ್ದಾಗ್ಗೆ ಮೌಲಾನಾ ಶೌಕತಅಲಿಯವರ ಯೂರೋಪಿಯನ ಪತ್ನಿಯವರಾದ ಬೇಗಮ್ ಶೌಕತಅಲಿಯವರು ಅಲ್ಲಿಯ "ಹೊಟೇಲ್ ಇಂಡಿಯಾ" ಎ ಖಾನಾವಳಿಯಲ್ಲಿ ಊಟ ಮಾಡುತ್ತಿದ್ದರು. ಆದರೆ ಆ ಖಾನಾವಳಿಯ 213 ರೂಪಾಯಿಗಳ ಬಿಲ್ಲನ್ನು ಕೊಡಲಿಲ್ಲವಾದ್ದರಿಂದ ಖಾನಾವಳಿಯ ಮೂಲಕರು ಮೌಲಾನಾ ಶೌಕತಅಲಿಯವರ ಮೇಲೆ ದಾವೆ ಮಾಡಿರುವರು.

ಈ ವಿಷಯವಾಗಿ ಮೌಲಾನಾ ಶೌಕತಅಲಿಯವರು ಆ ಖಾನಾವಳಿಯ ಮೂಲಕರಿಗೆ ಒಂದು ಪತ್ರ ಬರೆದಿದ್ದು ಅದರಲ್ಲಿ ಮುಸಲ್ಮಾನ ಪದ್ಧತಿಯಂತೆ ಪತ್ನಿಯವರು ಮಾಡಿದ ವ್ಯವಹಾರದಲ್ಲಿ ಅವರೇ ಅದಕ್ಕೆ ಜವಾಬ್ದಾರರಾಗುವರು. ಅಲ್ಲದೆ ಅವರ ಹೆಸರಿನಿಂದ ಬ್ಯಾಂಕಿನಲ್ಲಿ ಹಣವು ಇರುವದರಿಂದ ಅವರ ಕಡೆಯಿಂದಲೇ ಹಣವನ್ನು ವಸೂಲು ಮಾಡಬೇಕು ಎಂದು ಬರೆದಿರುವರಂತೆ.

—೦೦೦—

ಬ್ರಿಟಿಷ್ ಬಜೆಟ್.

ತಾ. 21 ರಲ್ಲಿ ಬ್ರಿಟಿಷ್ ಆರ್ಥಸಚಿವರಾದ ಮಿ. ನೆವಿಲ್ ಚೇಂಬರ್‌ಲೇನ್‌ರವರು ಬಜೆಟನ್ನು ಪಾರ್ಲಿಮೆಂಟಿನ ಮುಂದಿರಿಸಿದರು. ಬರುವ ವರ್ಷದ ಆಮದಿಯು 798 381,000 ಪವನುಗಳನ್ನು; ವೆಚ್ಚ 797,897,000 ಪವನುಗಳು. ಯುದ್ಧ ಪೂರ್ವತೆಗೆ (ಸೇನೆ ನೌಕಾಬಲ ಮತ್ತು ವಿಮಾನ ಪಡೆ) 537 ಮಿಲಿಯ ಪವನುಗಳು. ಕಳೆದ ವರ್ಷ ಸೇನಾಖಾತೆಗೆ ವೆಚ್ಚವು 512 ಮಿಲಿಯ ಪವನುಗಳು. ಆಮದಿಯ ಮೇಲಿನ ಕರವನ್ನು 3 ಪೆನ್ನಿಗಳಷ್ಟು ಹೆಚ್ಚಿಸಿದರು. ರಾತಲಿನ ಮೇಲೆ 2 ಪೆನ್ನಿಗಳಷ್ಟು ಟೀ ಸೊಪ್ಪಿನ ಮೇಲೆ ಕರ ಹೆಚ್ಚಾಗಿ ಹೊರಿಸಿದರು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿರುವ ಎಲ್ಲ ಪಕ್ಷಗಳವರೂ ಬಜೆಟನ್ನು ಖಂಡಿಸಿರುವರು.

—೦೦೦—

ಕಡು ಕೃಪಣನ ಅಂತಿಮ ವರ್ತನೆ.

ಎಡ್ವಿನ್ ಥಾಮಸ್ ಹೋವೆ ಎಂಬ ವಿಲಕ್ಷಣ ಲಂಡನ್ ನಿವಾಸಿಯೊಬ್ಬನು, ಸರಿಯಾಗಿ ಆಹಾರ ಕೂಡ ತೆಗೆದುಕೊಳ್ಳದೆ ಹಣ ಸಂಗ್ರಹಿಸಿಟ್ಟ. ಮೃತನಾಗುವ ಕೆಲವು ವಾರಗಳ ಮೊದಲು ಪ್ರತಿ ದಿವಸ ಬೆಳಿಗೆ ಒಂದೊಂದು ಪವನಿಗೆ ನೋಟನ್ನು ಸುಟ್ಟು ತನ್ನ ಚಟ್ಟು ಹೊತ್ತಿಸಿ ಸ್ನಾನಮಾಡಿ.

—೦೦೦—

ಬದುಕಿರುವವನಿಗೆ ಸತ್ತವನ ತಂಟೆ.

ಒಂದು ಅದ್ಭುತ ಶೋಧೆ!

ಆಡೆಸ್ಸಾ ಕಣ್ಣಾಸ್ಪತ್ರೆಯ ಫ್ರೊಫೆಸರ್ ವಿ. ಪಿ ಫಿಲೆಂಟರ್ ಎಂಬುವರು ಕುರುಡರು ಪುನಃ ನೋಡುವಂತೆ ಮಾಡಿರುತ್ತಾರೆ! ಸತ್ತಿರುವ ಶವಗಳ ಕಣ್ಣುಗಳನ್ನು ಕಿತ್ತು ಕುರುಡರ ಕಣ್ಣುಗಳಿಗೆ ಜೋಡಿಸುವುದೇ ಈ ಮಾರ್ಗ!! ಅವರು ಪರೀಕ್ಷಾರ್ಥವಾಗಿ ನಡೆಸಿದ ನೂರಾರು ಈ ತರಹ ಆಪರೇಷನ್‌ಗಳೆಲ್ಲವೂ ಸಫಲವಾಗಿ ಕುರುಡರು ಈಗ ಓಡಬಲ್ಲರಂತೆ! ಇದೀಗ ಕಲಿಯುಗದ ಮಹಿಮೆ!

—೦೦೦—

ವೆಲ್ಲೂರು ಜಿಲ್ಲಾ ಬೋರ್ಡ್.

ಕಳೆದ 27ನೇ ತಾರೀಕಿಗೆ ವೆಲ್ಲೂರು ಜಿಲ್ಲಾ ಬೋರ್ಡಿನ ಅಧ್ಯಕ್ಷರ ಚುನಾವಣೆಯು ಉತ್ತರ ಆರ್ಕಾಡು ಜಿಲ್ಲಾ ಕಲೆಕ್ಟರರವರಿಂದ ನಡಿಸಲ್ಪಟ್ಟಿತು. ಈ ಜಿಲ್ಲಾ ಬೋರ್ಡಿನ ಒಟ್ಟು ಸದಸ್ಯರ ಸಂಖ್ಯೆ 34. ಎಲ್ಲರೂ ಹಾಜರಿದ್ದರು. ಇವರೊಳಗೆ 22 ಮಂದಿ ಕಾಂಗ್ರೆಸು ಉಮೇದ್ವಾರರು ಕಾಂಗ್ರೆಸು ಪರವಾಗಿ ಶ್ರೀ. ಕಂಣಪ್ಪ ಮುದಲಿಯಾರರೂ ಇವರ ಪ್ರತಿಸ್ಪರ್ಧಿಗಳಾಗಿ ಜನಾಬ್ ಅಬ್ದುಲ್ ಹಕೀಮ್ ಸಾಹೇಬರೂ ಅಧ್ಯಕ್ಷ ಸ್ಥಾನಕ್ಕೆ ಉಮೇದ್ವಾರರಾಗಿದ್ದರು. ಕಾಂಗ್ರೆಸು ಉಮೇದ್ವಾರರಿಗೆ 15 ಮತಗಳು ಮಾತ್ರ ದೊರೆತವು. ಜನಾಬ್ ಹಕೀಮ್ ಸಾಹೇಬರಿಗೆ 17 ಮತಗಳು ಹೊರೆತು, ಅವರೇ ಜಯಶೀಲರಾದರು. ಮಿ. ನತೇನಿಯಲ್‌ರವರು ಕಾಂಗ್ರೆಸ್ಸಿನ ಕಡೆಯಿಂದ, ಪ್ರತಿಸ್ಪರ್ಧಿಗಳಿಲ್ಲದೆ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

—೦೦೦—

ಗರ್ಭಿಣಿ ಸ್ತ್ರೀಯರ ನೆರವಿಗಾಗಿ.

ಮೈಸೂರಿನಲ್ಲಿ ಒಂದು ಹೊಸ ಕಾನೂನು.

ಕೂಲಿ ಕೆಲಸ ಮಾಡುವ ಗರ್ಭಿಣೀಯರ ಆರೋಗ್ಯರಕ್ಷಣೆಗಾಗಿ ಒಂದು ಬಿಲ್ಲನ್ನು ಮೈಸೂರು ಸರಕಾರದವರು ಮುಂದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ತರಲಿರುವರಿದ್ದಾರೆ.

ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಸ್ತ್ರೀಯರ ಪೈಕಿ ಯಾರಾದರೂ ಗರ್ಭಿಣಿಯಾದರೆ ಅವರಿಗೆ ಹೆರಿಗೆಯಾಗುವುದಕ್ಕೆ ಮುಂಚೆ ನಾಲ್ಕು ವಾರಗಳೂ ಹೆರಿಗೆಯಾದ ನಂತರ ನಾಲ್ಕು ವಾರಗಳೂ ಪೂರ್ತಿ ಸಂಬಳದ ಮೇಲೆ ರಜಾ ಕೊಡಬೇಕೆಂಬುದೇ ಈ ಕಾನೂನಿನ ಉದ್ದೇಶ. ಹಾಗೆ ರಜಾ ಕೊಡಲ್ಪಟ್ಟವರು ಬೇರೆ ಕಡೆ ಏಲಿಯಾದರೂ ತಮ್ಮ ರಜಾ ಕಾಲದಲ್ಲಿ ಕೆಲಸ ಮಾಡುವುದು ಕಂಡು ಬಂದಲ್ಲಿ ಸಂಬಳವನ್ನು ಹಿಡಿಯಲಾಗುವುದು ಎಂಬ ಅಂಶವನ್ನು ಈ ಕಾನೂನಿನಲ್ಲಿ ಸಮೂಡಿಸಿರುವರು. ಈ ಕಾನೂನನ್ನು ಸರ್ಕಾರದವರೇ ಈ ಸಾರಿಯ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿಟ್ಟು ಅನಂತರ ನ್ಯಾಯ ವಿಧಾಯಕ ಸಭೆಗೆ ತರಲಾಗುವುದೆಂದು ಗೊತ್ತಾಗಿದೆ.

—೦೦೦—

ಇದೀಗ ನಾಗರೀಕತೆ.

20 ನೆಯ ಶತಾಬ್ದವು ನಾಗರೀಕತೆಯಲ್ಲಿ ಪ್ರಪಂಚವನ್ನು ಬಹಳ ದೂರವಿರುವರಿಗೂ ತಿಳಿದುಕೊಂಡು ಹೋಗಿದೆಯೆಂದು ಎಲ್ಲರೂ ಹೇಳುತ್ತಾರೆ. ಆದರೆ ಈ ಶತಾಬ್ದದಲ್ಲಿ ಶಾಸ್ತ್ರಜ್ಞರು ಕಂಡು ಹಿಡಿದ ಮುಖ್ಯವಾದ ಮರಣಾಸ್ತ್ರವು ಯಾವುದೆಂದರೆ ಗ್ಯಾಸು ಬಾಂಬುಗಳು. ಈ ಗ್ಯಾಸು ಬಾಂಬುಗಳ ಪ್ರಯೋಗದಿಂದಲೇ ಮುಸಲೋನಿಯು ಇತ್ತೋಪಿಯನರನ್ನು ಹೆಣಗಳಂತೆ ಸಾಯಿಸುತ್ತಿದ್ದಾನೆ

ಈ ಗ್ಯಾಸು ಬಾಂಬುಗಳ ಕಷ್ಟದಿಂದ ಹೇಗೆ ತಪ್ಪಿಸಿಕೊಳ್ಳಬೆಕೋ ಎಂಬುದನ್ನು ಕಲಿಸಲು ಇಂಗ್ಲೆಂಡಿನಲ್ಲಿ ಸಂಸ್ಥೆಯೊಂದನ್ನು ಕಟ್ಟಿರುವರು. ಈ ಸಂಸ್ಥೆಗೆ ಸುಮಾರು 1 ಲಕ್ಷ ರೂ ಪಾಯಿಗಳನ್ನು ವ್ಯಯಮಾಡುತ್ತಿರುವರು.

ಇದು ನಾಗರಿಕತೆ. ಮರಣ ಯಂತ್ರಗಳನ್ನು ನಿರ್ಮಾಣ ಮಾಡುವಿಕೆ ಮತ್ತು ಅವುಗಳಿಂದ ರಕ್ಷಣೆ ಮಾಡಿಕೊಳ್ಳಲು ಕಲಿಸುವಿಕೆ.

—೦೦೦—

ಈಜಿಪ್ಟಿನ ರಾಜರ ಮರಣ.

ಈಜಿಪ್ಟಿನ ದೊರೆಯಾದ ಫಾಡರವರು ಕಳೆದ ತಾರೀಕು 28 ರಲ್ಲಿ ಕಾಲವಾದರು. ಕಿಂಗ್ ಫಾಡರ ಮಗ ಪ್ರಿನ್ಸ್ ಫರೋಕ್‌ರವರು ಈಗ ಈಜಿಪ್ಟಿನ ರಾಜರಾಗಿ ಸಾರಲ್ಪಟ್ಟಿದ್ದಾರೆ.

—೦೦೦—

ಬೆಂಗಳೂರಿಗೂ ಒಂದು ಎರೋಡೆ್ರಂ.

ಬೆಂಗಳೂರು ದೊಡ್ಡ ಒಳ್ಳಾಪುರಗಳ ಮಧ್ಯೆ ಬೆಂಗಳೂರಿನಿಂದ ಎಂಟು ಮೈಲಿ ದೂರದಲ್ಲಿನ ಜಕ್ಕೂರ್ ಎಂಬಲ್ಲಿ ಮೈಸೂರು ಸರ್ಕಾರದವರು ಒಂದು ಏರೊಡೆ್ರಂ (ವಿಮಾನನಿಲ್ದಾಣ) ಕಟ್ಟುವದಕ್ಕೆ ಸಿದ್ಧತೆ ಮಾಡುತ್ತಿರುವರು ಒಂದು ಸಾವಿರ ಚದರ ಗಜಗಳ ಪ್ರದೇಶವು ದುರಸ್ತು ಮಾಡಲಾಗಿದೆ. ಈವರೆಗೆ ಆಗಿರುವ ಖರ್ಚು 36,000 ರೂಗಳು.

—೦೦೦—

ವಿಚಿತ್ರ ನಾಯಿ.

ಫ್ಲೋರಿಡಾ ದೇಶದ ಸೆಂಟಪೀಟರ್ಸ್‌ಬರ್ಗ ಪಟ್ಟಣದ ಒಬ್ಬ ನಿವಾಸಿಯಲ್ಲಿ ಒಂದು ವಿಚಿತ್ರವಾದ ನಾಯಿಯು ಇರುವದು. ಅದು ದ್ರಾಕ್ಷೆ ಮತ್ತು ಕಿತ್ತಳೆ ಮಂಗಗಳಿಗೆ ಹತ್ತಿ ಹಂಣುಗಳನ್ನು ತಿನ್ನುವುದು. ಅದರ ಪ್ರೀಯ ಆಹಾರವೆಂದರೆ ಬಾಳೇಹಣ್ಣು, ಪೇರಲ ಹಣ್ಣು.

—೦೦೦—

ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟಿನ ಚಲಾವಣೆ.

ಶ್ರೀಯುತ ದೇವನಾಂದಾನಂದ ದೀಕ್ಷಿತ್ ಎಂಬಾತನು ಬಂಗಾಳ ಪ್ರಾಂತ್ಯದ ಗಡಿದಾಟಿ ಒಳಗೆ ಬಕಕೂಡದೆಂದು ಬಂಗಾಳ ಗವರ್ನರರು ಆಜ್ಞೆ ಮಾಡಿದ್ದಾರೆ.

ಶ್ರೀ ದೀಕ್ಷಿತರು ಗಾಂಧಿಜೀಯವರ ಅಸಹಕಾರದ ದಿವಸಗಳಲ್ಲಿ ಕಾಶೀ ವಿಶ್ವವಿದ್ಯಾನಿಲಯವನ್ನು ಬಹಿಷ್ಕರಿಸಿ ಕಾಶಿಯಲ್ಲೇ ಇದ್ದ ಆಚಾರ್ಯ ಕೃಪಾಲಿನಿಯವರ ಆಶ್ರಮವನ್ನು ಸೇರಿದರು. ಅನಂತರ 1927ರಲ್ಲಿ ಕಲ್ಕತ್ತೆಗೆ ಹೋಗಿ ಅಲ್ಲಿ ಬಂಧಿತರಾಗಿದ್ದರು. ಬಂಧನ ವಿಮುಕ್ತರಾದ ಮೇಲೂ ಖಾಯಿಲೆಯೊಗಿದ್ದ ಇವರ ತಾಯಿಯನ್ನು ನೋಡಿಕೊಳ್ಳಲು ನಾಲ್ಕು ತಿಂಗಳು ಅವಕಾಶ ಕೊಡಲ್ಪಟ್ಟಿದ್ದಿತು. ಈ ನಾಲ್ಕು ತಿಂಗಳು ಮುಗಿಯುವ ಹೊತ್ತಿಗೇ ಅವರು ಈಗ ಬಂಗಾಳದಲ್ಲಿರಕೂಡದೆಂದು ವಿಧಿಸಲ್ಪಟ್ಟಿದೆ. ಗವರ್ನರರಿಗೆ ಈ ವಿಶೇಷಾಧಿಕಾರವು ಜನತೆಯು ವಿರೋಧಿಸುತ್ತಿರುವ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟ್‌ನಿಂದ ಕೊಡಲಾಗಿದೆ.

—೦೦೦—

ಭಯಂಕರ ಸರ್ಪಗಳು.

'ಇಂಡಿಯನ್ ಫೊಸ್ಟರ್' ಎಂಬ ಪುಸ್ತಕದಲ್ಲಿ ಸರ್ಪಗಳ ಕುರಿತು ಹೀಗೆ ಬರೆದಿರುತ್ತದೆ. 'ಕುಲ್'ನಾಶಕ' ಎಂಬ ಜಾತಿಯ ಸರ್ಪವು ಸರ್ಪ ಜಾತಿಯಲ್ಲಿ ಭಯಂಕರತಂದ್ದಾಗಿರುವುದು. ಇದು ಒಂದು ಕಡ್ಡಿಯನ್ನು ಕಡಿದರೆ, ಕಡ್ಡಿಯು ಸುಟ್ಟು ಭಸ್ಮವಾಗುವುದಲ್ಲದೆ—ಆ ಕಡ್ಡಿಯು ಯಾವ ವಂದಿಂದ ಯಾ ಪೊದರಿನಲ್ಲಿ ಬಂತೋ ಅದು ಕೂಡ ಸುಪೂರ್ಣ ಸುಟ್ಟು ಬೂದಿಯಾಗುವುದು.

ಇನ್ನೊಂದು ಜಾತಿಯ ಸರ್ಪವು, 'ಅಗನ್ ಜಾಹಾರ್' ಎಂಬುದು ಇದರಲ್ಲಿ ವಿಷವು ಎಷ್ಟಿರುವುದೆಂದರೆ, ಇದು ಸರಿದು ಹೋದಲ್ಲಿ ಇರುವ ಹುಲ್ಲು ಸುಟ್ಟು ಬೂದಿಯಾಗುವುದು.

'ಕಾಳಾಸಾಗ' ಎಂಬುದು ಮತ್ತೊಂದು ಜಾತಿಯ ಸರ್ಪವು. ಈ ಸರ್ಪವಿದ್ದಲ್ಲಿ ಒಂದು ಪ್ರಕಾಶವಾನವಾದ ದೀಪವಿಟ್ಟರೆ, ಪ್ರಕಾಶವು ಕುಂದುವುದು. ಗಾಳಿಯಲ್ಲಿ ಹರಡುವ ಇದರ ವಿಷದ ಪ್ರಭಾವದಿಂದಂತೆ

'ನಾಗ್‌ಶಂಕ್ ರೈಕ್' ಎಂಬುದು ಭಯಂಕರ ವಿಷಕರ ಸರ್ಪವು. ಇದು ಕಚ್ಚಿದ ಮನುಷ್ಯನು ಹತ್ತೇ ನಿಮಿಷದಲ್ಲಿ ಮೃತನಾಗುವೆನು.

ಸರ್ಪಕಡಿತವಾದ ಮನುಷ್ಯನ ಹಲ್ಲುಗಳು ಹುಳಿಯಾಗುವವು. ಆತನಿಗೆ ಯಾವತ್ತೂ ತಿಂಡಿಯನ್ನು ಜಗಿಯಲು ಸಾಧ್ಯವಾಗದು.

ಸರ್ಪ ಕಡಿತದಿಂದ ರಕ್ಷಿಸಿಕೊಳ್ಳುವ ಉಪಾಯ—ಕಡಿತವಾದ ಭಾಗವನ್ನು ಮುಂಚೆ ಕಡಿಯಬೇಕು. ಒಂದು ಹೆಂಟೆ ತೆಳ್ಳಿಯ ಮೇಲಿನ ರೋಮವನ್ನು ತೆಗೆದು ಅನ್ನು ಗಾಯದ ಮೇಲೆ ಇಡಬೇಕು. ಹತ್ತು ನಿಮಿಷಗಳಲ್ಲಿ ಹೇಟೆಯು, ಕೈ ಕಾಲು ಬಡೆಯಲು ಪ್ರಾರಂಭವಾಡುವುದು. ಆದರೆ ಅದು ಸಾಯುವ ತನಕ ಅದನ್ನು ಅಲ್ಲಿಂದ ತೆಗೆಯಬಾರದು. ಇದರಿಂದ ಸರ್ಪಕಡಿತ ಉಪಶಮನವಾಗುವುದು.

—೦೦೦—

ಮುಂದಾಳುಗಳ ಮುಂದೆ ಇಂದಿನ ಸಮಸ್ಯೆ.



ಪ. ತಾರಾನಾಥರ ಸಂವಾದದ ಆಧಾರದಿಂದ.

ಹೀಡೂಸ್ಥಾನಕ್ಕಿಂದು ತನ್ನ ನಿಜಸ್ಥಿತಿಯು ಗೊತ್ತಿಲ್ಲದೆ, ತನ್ನ ಧೀರೋದಾತ್ತ ವಿಚಾರಗಳೆಲ್ಲ ಗ್ರಂಥದ ಗೋರಿಗಳಲ್ಲಿ ಯೇ ಹುಗಿದು ಹೋಗಿವೆಯೆಂಬುದೂ ತಿಳಿದು ಹೋಗಿವೆ ಬಹುಶಃ ನೈಜ್ಯ—ಮೂತ್ಸರ್ಯ ಯೂದವೀ ಯುದ್ಧಗಳೇ ನಮ್ಮ ಒಹು ಸಂಖ್ಯಾತರ ಜೀವ ಜೀವಾಳವಾಗಿದೆ ಎಂಬುದೂ ಮನ ವರಿಕೆಯಾಗಿದೆ.

ಈ ಗುಲಾಮಗಿರಿಯು ನಮ್ಮ ದುರ್ಗುಣದ ಪರಿಣಾಮ ಪರಿಣಾಮವನ್ನು ಹೇಗಿಸಬೇಕಾದರೆ ಕಾರಣವನ್ನೇ ತೆಗೆದು ಹಾಕಬೇಕು ತಾನೆ? ಹೇಸಿಗೆಯನ್ನು ಹೂತಿಟ್ಟು ಹೊಲಸು—ವಾಸನೆಯನ್ನು ಮಾತ್ರ ತೆಗೆದು ಹಾಕುವೆಂದರೆ ಸಾಧ್ಯವೇ? ನೈಜ್ಯ, ಅಂತಃಕಲಹ, ಅಜ್ಞಾನಾದಿ ದುರ್ಗುಣಗಳು ನಮ್ಮ ಒಹು ಸಂಖ್ಯಾತ ಬಾಂಧವರಲ್ಲಿ ನೆಲೆಗೊಂಡಿದ್ದರೂ ಸಹ ಅದನ್ನು ಹಾಗೆಯೇ ಉಳಿಯಗೊಟ್ಟು, ಕೇವಲ ದುರ್ಗುಣ ಪರಿಣಾಮವಾದ ಪಾರತಂತ್ರ್ಯವನ್ನು ಮಾತ್ರ ಹೊರದೂಡುವುದು ಸಾಧ್ಯವಾದೀತೆ? ಆದ್ದರಿಂದ ಇಂದಿನ ಮುಂದಾಳುಗಳ ಧೋರಣವು ಜನತೆಯ ಜೀವಾಳದಲ್ಲಡಗಿದ ದುರ್ಗುಣದ ಬೀಜಗಳನ್ನು ಹುರಿದೊಗೆಯ ಬೇಕಾದ್ದಾಗಿರಬೇಕು ಈ ಮಹತ್ಕಾರ್ಯಕ್ಕಾಗಿ ಅನೇಕ ಮಂತ್ರೋಪಾಯಗಳು ನಡೆದಿವೆ, ಕಾರ್ಯಕ್ರಮಗಳು ಯಿಂದೆ ಒಂದಿವೆ. ಆದರೆ ನಮ್ಮವು ವಾಕ್ಚಾತುರ್ಯ, ಪ್ರತ್ಯೇಕ, ಕ್ಯಗುಣ, ಇತ್ಯಾದಿಗಳಿಗೂ, ಇಂದಿನ ಮುಂದಾಳುಗಳು ನಿಯಮಿಸಬೇಕೆಂದಿರುವ ಧೋರಣೆಗೆ ಸೂಚನೆಗಳಿಗೂ ತಾಳ ಮೇಳವಾಗಬಹುದೇ ಯೊಂಬೊಂದು ಸುದೇಹ.

'ನಮಗೆ ಒಕ್ಕಟ್ಟು ಬೇಕು. ಅದಕ್ಕಾಗಿ ನಮ್ಮ ಅಂತಃಕಲಹಗಳು ಅಳಿಯಬೇಕು. ಒಂದು ಭಾವನೆಯಾಗಬೇಕು, ಸಮವೇದನೆಯುಂಟಾಗಬೇಕು. ಇಂದಿನ ಸಂಕಟವು ಕೇವಲ ಹಿಡಿತುಂಬ ಜನತೆಗಾಗಿ ಅಲ್ಲ ನಮ್ಮ ಬಾಂಧವರಿಗೂ ಇದೆ. ಅವರೆಲ್ಲರೂ ಇದರಲ್ಲಿ ಭಾಗಿಗಳಾಗಬೇಕು. ಎಲ್ಲರೂ ತಾವು ಕಷ್ಟದಲ್ಲಿದ್ದೇವೆ ಎಂಬ ಪ್ರಯತ್ನವನ್ನು ಪಡೆದುಕೊಳ್ಳಬೇಕು' ಇದು ಹೇಗೆ ಸಾಧ್ಯ?

'ಹಿಂದೂಸ್ಥಾನದಲ್ಲಿ ಕೈಗಾರಿಕೆಯ ಏಳಿಗೆಯಾಗಬೇಕು, ಮೆಶೀನ್ಸ್ ಬರಬೇಕು, ಎಲ್ಲರ ಜೀವ ಮಾನ (Standard of life) ವು ಮೇಲ್ಮಟ್ಟದ್ದಾಗಬೇಕು. ನಿತ್ಯ ಜೀವನದ ಅಗತ್ಯಗಳು ಬೆಳೆಯಾಗಬೇಕು, ಅಲ್ಪ ತೃಪ್ತಿಯು ಅಳಿಯಬೇಕು. ಆಂದರೆ ಪೂರ್ತ ಮಾನವನು ಸ್ವತೋದ್ಯೋಗಿಯಾಗುವನು. ಅವನ ಆತ್ಮ ಗೌರವವು ಬೆಳೆಯುವದು. ಗೌರವಕ್ಕೆ ತಕ್ಕ ವರ್ತನವು ಉಂಟಾಗುವದು ಆಗವನು ಸೈಜ್ಯಕ್ಕೆ ಎಡೆಗೊಡಲಾರ. ಆತ್ಮ ಗೌರವಕ್ಕೆ ಕುಂದು ಬಂದಾಗಲೆಲ್ಲ ಎಲ್ಲರಲ್ಲಿ ಸಮವೇದನೆಯುಂಟಾಗಿ ಒಗ್ಗಟ್ಟು ನೆಲಗೊಳ್ಳುವದು....ಎಂದೂ ಮುಂತಾಗಿ ಹೇಳುವವರೇಕಾದ್ದಾರೆ. ಇದೆಲ್ಲವೂ ಸಮಂಜಸವಾಗಿಯೇ ಕಾಣುವುದು. ಆದರೂ ಕೆಲ ಸುದೇಹಗಳೇಳುವವು.

ಹಿಂದೂಸ್ಥಾನವು ಎಂದಿನಿಂದಲೂ ಒಕ್ಕಲಿಗರ ದೇಶ ಪಶ್ಚಿಮದ ದೇಶಗಳಂತೆ ಇದು ಕೈಗಾರಿಕೆಯ ದೇಶವಲ್ಲ. ಕೈಗಾರಿಕೆಯ ದೇಶಗಳಲ್ಲಿ ಲಕ್ಷೋಪಲಕ್ಷ ಜನರು ಒಂದೇ ಒಂದು ಕಡೆ ಕೂಡಿಕೊಂಡು ಕೆಲಸ ಮಾಡುವುದುಂಟು. ಅವರು ತಮ್ಮ ಸುಖದುಃಖಗಳನ್ನು ತಿಳಿದುಕೊಳ್ಳಬಲ್ಲರು. ಅಲ್ಲದೆ ಅಲ್ಲಿ ಒಗ್ಗಟ್ಟನ್ನುಂಟುಮಾಡುವುದೇನು. ಅಂತಹ ಬಿಕ್ಕಟ್ಟಿನ ಕೆಲಸವಲ್ಲ. ಅವರಲ್ಲಿ ಸಮವೇದನೆಯನ್ನು ಬೆಳೆಸುವದು ಸುಲಭ. ಒಂದು ದಿನ ಮಿಲ್ 'ಬಂದ್' ಆದರೆ ಅವರೆಲ್ಲರಿಗೂ ಊಟಕ್ಕೆ ಲೋಪ. ಕೂಡಲೇ ಹೊಟ್ಟೆಗಾಗಿ ಎಲ್ಲರೂ (Common cause) ಸಾಮಾನ್ಯ ಕಾರಣ ಮಾಡಿಕೊಂಡು ಒಂದಾಗಿ ಬಡುತ್ತಾರೆ, ಮುಂದೆ ಒರುತ್ತಾರೆ. ಈ ಸ್ಥಿತಿಯು ನಮ್ಮಲ್ಲುಂಟೋ? ಹಳ್ಳಿಗಳ ದೇಶವಾದ ನಮ್ಮಲ್ಲಿ ರೈತರು ಸಾವಿರ ಗಟ್ಟಲೆ ಒತ್ತಟ್ಟಿಗೆ ನೆರೆಯುವುದೇ ಅಪರೂಪ. ನೆರೆದ ಸಂತೆಗಾಗಿಯೋ, ಜಾತ್ರೆಗಾಗಿಯೋ, ಜೀವಿತಕ್ಕಾಗಿ, ಉದರ ಪೋಷಣೆಗಾಗಿ ಒಟ್ಟಲ್ಲಿ ಕೂಡುತ್ತಾರೆಯೋ? ಆದ್ದರಿಂದ ಅವರೆಲ್ಲರಿಗೂ ಸಮವೇದನೆಯನ್ನುಂಟು ಮಾಡುವ ಪ್ರಸಂಗಗಳೂ ವಿರಳ. ಪ್ರತಿಯೊಬ್ಬನೂ ತನ್ನ ಗೇಣು ಭೂಮಿಯಲ್ಲಿ ಉಳಬಿತ್ತಲಿಕ್ಕೆ ಸದಾಸಿದ್ಧನೇ. ಅವರಲ್ಲಿ ಬೆಳೆದು ಬರುವ ಸೆಕ್ಕು ಮುಕ್ಕುಗಳನ್ನು ಮುಕ್ಕಿ ಬದಕಲೂ ಅವನು ತಯಾರು ಅದರಲ್ಲಿಯೇ ಅವನ ಅಲ್ಪಕೃಪ್ತಿ, ಹೀಗಿದೆ ನಮ್ಮವರ ಸ್ಥಿತಿ.

ಇನ್ನು ಕೆಲವರ ಹೇಳಿಕೆಯಂತೆ ದೈತನ ಕಚ್ಚಾವಸ್ತುವಿಗೆ ಮಾರ್ಕೆಟ್ ಬಂದಾದೀತೆಂಬ ಭಯವೂ ಅವನನ್ನು ಹತಾದಿಗೆ ತರಲಾರದು. 'ನೆಲಗಡ್ಲೆಯು ಮಾರಾಟವಾಗುವುದಿಲ್ಲ. ಅದಕ್ಕೆ ಮಾರ್ಕೆಟ್' ಲೋಪ, ಎಂದು ಹೆದರಿಸಿದರೆ—ರೈತರು ಅದಕ್ಕೆ ಸೊಪ್ಪು ಹಾಕುವದಿಲ್ಲ. ನೆಲಗಡ್ಲೆಯನ್ನು ಮಾರುವುದೇ ಇಲ್ಲ. ಇದ್ದದ್ದನ್ನೇ ತಿಂದು ಬದಕುತ್ತೇವೆ.—ಇತ್ಯಾದಿಯಾಗಿ ಉತ್ತರಿಸುವುದು ಒಟ್ಟಾರೆ, ಇಡಿಯಾಗಿ ರೈತರ ಜೀವನಾಡಿಯನ್ನೇ ವಿಂಟಿ ಜಾಗ್ರತೆಗೊಳಿಸುವುದು ನಮ್ಮಲ್ಲಿ ಶಕ್ಯವೆಂದು ತೋರುವುದಿಲ್ಲ. ಅವರಿಗೆ ಯಾವೊಂದು ವಿಷಯವನ್ನೂ ಕೂಡಲೇ ಸಾಮಾನ್ಯ ಕಾರಣವಾಗಿ ಮಾಡಿ ತೋರಿಸಲೂ ಆಗುವದಿಲ್ಲ.

ಇನ್ನು ಜೀವ ಮಾನವನ್ನು ಎರಿಸಿ, ಅವರನ್ನು ಹಾದಿಗೆ ತರಬೇಕೆನ್ನುವದು. ಇದೂ ವಿವಾದಾರ್ಹ ವಿಷಯ. ಯಾಕೆಂದರೆ ಸುಖವು ಎಲ್ಲರಿಗೂ ಬೇಕು. ನಮ್ಮ ಹಿಂದು ವಾಸಿಗಳು ಸುಖ ಪ್ರಿಯರೂ ಅಹುದು. ಆದರೆ ನಮ್ಮ ಸುಖಪ್ರಿಯತೆಗಿಂತ ಅಲಸ್ಯ ಪ್ರಿಯತೆ ನಮ್ಮಲ್ಲಿ ಹೆಚ್ಚು. ಸುಖವೂ ಮೇಲ್ಮಂದ ಬೀಜನವೂ ನಮಗೆ ಶ್ರಮವಿಲ್ಲದೇ ಬರಬೇಕು. ಅದರೆ ಮಾತ್ರ ನಮಗೆ ಅದು ಬೇಕು. ತಾವು ಸ್ವಚ್ಛತಾಪ್ರಿಯರು, ರಸಿಕ ಜೀವಿಗಳು ಎಂದು ಹೇಳಿಕೊಳ್ಳುವ ಸಾಮಾನ್ಯರ ಮನೆಗೆ, ಕಪಗುತ್ತಿಸುವ ಆಳು ಬಾರದ ದಿನ ಹೋಗಿ ನೋಡಬೇಕು, ಅಥವಾ ಹೆಂಡತಿ ಹೆರಿಗೆಯಾದಾಗ ಅವರ ಆಡಿಗೆಯ ನೆಗೆ ಸೇರಬೇಕು ಅಲ್ಲಿ ಅವರ ಸ್ವಚ್ಛತೆಯು ಓಡೆದು ಕಾಣುವದು. ಯೂರೋಪಿಯನ್ ಅಫೀಸರನು ಮೇಲಧಿಕಾರಿಯಾಗಿದ್ದಾನೆಂದು ಮುಖ ಕಾರ್ಯರ ಮಾಡಿಕೊಳ್ಳುವ ಜನರೆಷ್ಟೋ ಮಂದಿ ನಮ್ಮಲ್ಲಿ. ನಮ್ಮ ಸ್ವಚ್ಛತಾಪ್ರಿಯತೆಗೆ ಹೊರಗಿನ ಏಟು ಬೇಕು, ಒತ್ತಾಯಬೇಕು ಅಥವಾ ಪುಣ್ಯಕ್ಕಾಗಿ ಬಂದು ಬಿಡಬೇಕು. ಶಾಲೆಯ ಸರ್ಟಿಫಿಕೇಟು ಪಡೆಯ ಸಮ್ಮ ಶಿಕ್ಷಿತ ವರ್ಗವೇ ಹೀಗೆ ಆಲಸ್ಯ ಪ್ರಿಯವಾಗಿರುವಾಗ ರೈತರು ಜೀವ ಮಾನವನ್ನು ಬೆಳೆಸಿ ಮುಂಬಿ ಬರುವ ಸಂಭವವೆಲ್ಲಿ?

ಇದಲ್ಲದೆ ಎಲ್ಲಕ್ಕಿಂತ ದೊಡ್ಡ ತೊಡಕಿರುವುದು ಅಂದರೆ ನಮ್ಮ ಧರ್ಮ ಒಬ್ಬೊಬ್ಬರಿಗೆ ಧರ್ಮ ಒಂದೊಂದು ವಿಧ. ಅವರದು ಇವರಿಗೆ ಸೇರಿಕೆ ಇಲ್ಲ, ಇವರದು ಅವರಿಗೆ ಸೇರಿಕೆ ಇಲ್ಲ. ಹಿಂದೂಗಳ ಪೂಜೆಯ ಗುಟ್ಟು ಏನು ಮಹಮ್ಮದೀಯರ ದೇವರ ಕಿವಿಗೆ ಸಹ ಬೀಳಬಾರದು, ಮಹಮ್ಮದೀಯರ ನೈವೇದ್ಯದ ಗೋವೂಂಸವು ಹಿಂದೂ ದೇವರ ಕಣ್ಣಿಗೂ ಬೀಳಬಾರದು ಅಕಸ್ಮಾತ್ ಬಿದ್ದರೆ ಜಗಳಕ್ಕೇ ಆರಂಭ. ಹೀಗೆ ದೇವ ದೇವರಲ್ಲಿ ಹೂಡೆದಾಟ, ಒಡೆದಾಟ. ದೇವರಿಗಾಗಿ ಕಾದಾಡಿದುಂಟು. ರಕ್ತದ ಕಾಲುವೆ ಹರದುದುಂಟು. ಸಾರಾಂಶ—ನಮ್ಮ ದೇವನಿಗೆ ಶಾಂತಿ ಬೇಕಾಗಿಲ್ಲ; ಭ್ರಾಂತಿ ಒಡೆದಾಟಬೇಕು. ಕಾಡು ಮಾತಿನಲ್ಲಿ ಹೇಳಬೇಕಾದರೂ ನಮ್ಮ ದೇವನೆಂದರೆ ಹುಳಿತ ಹೆಗ್ಗಣ. ದೇವನ ಅನುಯಾಯಿಗಳಂದ ನಾವೆಂದರೆ, ಆ ಹೆಗ್ಗಣಕ್ಕಾಗಿ ಕಾದಾಡುವ ಸಾಸಿರ ಬೆಕ್ಕುಗಳು; ಗುರುಗುಟ್ಟುವುದೂ, ಮೈಂವು ಗುಟ್ಟುವುದೂ, ಸಮಯ ಸಿಕ್ಕಿದಾಗ ಪರಚಿಕೊಳ್ಳುವುದೂ ನಮ್ಮ ಧರ್ಮೋದ್ಯೋತನ. ಇಂತಹ ಧರ್ಮವು ನಮ್ಮ ಜೀವನಾಡಿಯಾಗಿರುವಾಗ ಒಕ್ಕಟ್ಟೆಂಬುದು ಕುರುಡನ ಕನಸೇ ಅಲ್ಲವೆ.

ಇನ್ನೊಂದು ನಮ್ಮ ನೈಜ್ಯದ ಪರಮಾವಧಿ ಎಂದರೆ 'ನಮ್ಮ ಹಣೇ ಬರಹವಾದ ರಾಮನಾಳಿದರೇನು, ರಾವಣನಾಳಿದರೇನು? ನಮ್ಮ ಹಣೇ ಬರಹವೇನೂ ತಪ್ಪುವುದೇ ಎಂಬ ಭಾವನೆ. ಇವೆಲ್ಲ ಇದ್ದ ಸುದ್ದಿಗಳು ಎದ್ದ ಸಮಸ್ಯೆಗಳು. ಇವನ್ನು ಬಿಡಿಸುವದು ಹೇಗೆ?

ಆರೋಗ್ಯ ವಿಚಾರ.

ಮಲಬದ್ಧತೆ.

ಅಲಕ್ಷ್ಯ ಮಾಡಬಾರದ ವ್ಯಾಧಿ.

ಆಹಾರ ಮೂರ್ಗಗಳು ಜಡವಾಗಿ, ಅದರ ಕಾರ್ಯ ಸಾಮರ್ಥ್ಯವು ಕೆಡುವುದು. ಅಂದಲ್ಲಿ ಅಡಚಣೆಗಳುಂಟಾಗುವುದೂ ಪ್ರಾಯಶಃವಾಗಿ ಅನೇಕ ರೋಗಗಳಿಗೆ ಕಾರಣಗಳೆಂದು ಹೊಸ ಶೋಧನೆಗಳಿಂದ ಕಂಡುಂಬಿವೆ, ಆಲಸ್ಯದಿಂದ ಕೆಲಸ ಮಾಡುವ ವಿಸರ್ಜನಾಕಾರ ಅವಯವಗಳಲ್ಲಿ ಯಾವಾಲಕ್ಕ ಆಹಾರ ಶೇಷವಿದ್ದೇ ಇರುವುದು. ಆಗ ಈ ಅವಯವಗಳಲ್ಲಿ ಸಾಧಾರಣವಾಗಿ 16 ಅಥವಾ 18 ಗಂಟೆಗಳ ಕಾಲದಲ್ಲಿ ಆಗಬೇಕಾದ ಮಲವಿಸರ್ಜನೆಯು ಕಾರ್ಯವು ನಾಲ್ಕಾರು ದಿನಗಳಿಗಿಂತಲೂ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದೆಂದು 'X' ರೇ ಎಂಬ ವಿದ್ಯುಚ್ಛಕ್ತಿ ಯಂತ್ರಗಳಿಂದ ನಿರ್ಧರಿಸಿ ಕಂಡುಹಿಡಿಯಲ್ಪಟ್ಟಿದೆ. ಈ ಮಲಬದ್ಧತೆ ಇದ್ದಾಗಲೂ, ಭೇದಿಯ ಗುಳಿಗೆಗಳ ಮತ್ತು ಭೇದಿ ಸಿಪ್ಪುಗಳ ಉಪಯೋಗದಿಂದ ಪ್ರತಿ ದಿನವೂ ಸರಿಯಾಗಿ ಮಲವಿಸರ್ಜನೆಯಾಗುವಂತೆ ಮಾಡಬಹುದು.

ಇಂತಹ ಮಲಬಂಧದಿಂದ ಆಹಾರ ನಾಳಗಳಲ್ಲಿ ವಿಷಕರ ಒಂಧವಾದ ಕ್ರಿಮಿಗಳು ಜನಿಸುವುದು. ಅಲ್ಲಲ್ಲಿ ತಂಗಿನಿಂತ ಆಹಾರದ ಶೇಷವು ಅಲ್ಲಿಯೇ ಕೆಳೆತು ಸೊರಗಟ್ಟಿ, ಅದರಿಂದ ಅನೇಕ ವಿಧವಾದ ಕಷ್ಟಕರವಾದ ರೋಗಗಳೂ ಉಂಟಾಗುವವು. ಹೀಗೆ ಆಹಾರವು ಕೆಳೆತು ಮುದರಿರುವ ಅನೇಕ ಅಪಾಯಕರವಾದ ರೋಗಗಳು ಸುಭವಿಸುವುದನ್ನು ನೋಡಿ, ಕೆಲವು ಪ್ರಮುಖರಾದ ಶಸ್ತ್ರ ವೈದ್ಯರು ಅಂತಹ ಸಂದರ್ಭದಲ್ಲಿ ದೊಡ್ಡ ಕರುಳನ್ನೇ ತೆಗೆಯಬೇಕೆಂದು ನಿರ್ಧರಿಸಿ, ಅದರಂತೆ ಶಸ್ತ್ರ ಪ್ರಯೋಗವನ್ನೂ ಮಾಡುವುದುಂಟು.

ಆದರೆ ಪ್ರಕೃತಿ ಸೃಷ್ಟಿಯಲ್ಲಿ ಅನುಪಯೋಗವಾದ ವಸ್ತು ಅನಾಯಕಾರಣವಾದ ಅವಯವವೆಂಬುದೆನ್ನೇ ನಾವು ನಂಬಲಾರೆವು. ಮನುಷ್ಯನ ಅನುಚಿತವೂ ಅನಾಯಕರವೂ ಆದ ಆಹಾರವನ್ನು ಉಪಯೋಗಿಸುವ ತಪ್ಪಿನಿಂದಲೇ ಇಂತಹ ಕಷ್ಟಗಳನ್ನು ತಾನಾಗಿ ತಂದುಕೊಳ್ಳುವನು. ಇಂತಹ ಅನಾಯವಾದ ಸಂಕಟಗಳಿಗೆಗಾನ್ನು ತಪ್ಪಿಸಿದ ಪಕ್ಷದಲ್ಲಿ ಪ್ರಕೃತಿಯು ಜಡವಾದ ಆಹಾರನಾಳದ ಕೆಲಸವನ್ನು ತಾನಾಗಿ ಸರಿಪಡಿಸುವುದು.

ದುರ್ವಾಸನೆಯುಳ್ಳ ಮಲವು ಆಹಾರನಾಳದ ಅನಾರೋಗ್ಯತೆಯನ್ನು ಸೂಚಿಸುವುದು. ಪ್ರತಿದಿನವೂ ಮೂರು ಸಾರಿ ಮಲವಿಸರ್ಜನವಾಗುತ್ತಿದ್ದರೆ ಅಂತಹ ಅನಾಯಕ್ಕೆ ಕಾರಣವಿಲ್ಲ. ಆಹಾರವನ್ನು ಭುಜಿಸಿದೊಡನೆ ಮಲವಿಸರ್ಜನೆ ಮಾಡುವುದನ್ನು ಅಭ್ಯಾಸದಿಂದ ಕಲ್ಪಿಸಿಕೊಳ್ಳಬಹುದು. ಸರ್ವಸಾಧಾರಣವಾಗಿ ಮಲವಿಸರ್ಜನೆ ಉಂಟಾಗುವ ವರ್ಗೂ ಈ ಅಭ್ಯಾಸವನ್ನು ಮಾಡುತ್ತಿರಬೇಕು

ಮೇಲೆ ಹೇಳಿದ ಅಭ್ಯಾಸವನ್ನು ಮಾಡುವದರೊಡನೆ ಭೋಜನ ಪದಾರ್ಥಗಳ ಸಂಗಡ ಪ್ರತಿದಿನವೂ ಪಕ್ವವಾಡದೇ ಭುಜಿಸತಕ್ಕ ಹಣ್ಣು ಕಾಯಿಗಳನ್ನು ಧಾರಾಳವಾಗಿ ಭುಜಿಸುತ್ತಾ ಬರಬೇಕು. ಆಹಾರವನ್ನು ಭುಜಿಸುವಾಗ ಪಕ್ವವಾಡಿದ ತರಕಾರಿಯನ್ನು (ಒಂದೆರಡು ಸವುಟಿನಷ್ಟು) ತೆಗೆದುಕೊಳ್ಳುವುದು ಮಲಬದ್ಧತೆಯ ನಿವಾರಣೆಗೆ ಅನುಕೂಲ. ಹೂಂಸ ಆಲೂಗೆಡ್ಡೆ, ಮೈದಾ ಹಿಟ್ಟಿನ ರೊಟ್ಟಿ ಇವುಗಳನ್ನು ಕಾಫಿ ಟೀ ಯೊಡನೆ ಉಪಯೋಗಿಸುವುದರಿಂದ ಈ ರೋಗವು ಮತ್ತಷ್ಟು ಅಧಿಕವಾಗುವುದು

ಭೇದಿಕಾರಿಗಳಾದ ಔಷಧಗಳೂ, ಗುಳಿಗೆಗಳೂ ಈ ಆಹಾರನಾಳದ ಜಡತ್ವವನ್ನು ನಿವಾರಿಸಲಾರವು. ಆ ರೋಗವನ್ನು ಮತ್ತಷ್ಟು ತೀವ್ರ ಮಾಡುವುವು ಕಾಲ ಪ್ರಕೃತಿಯು ಸರಿಯಾಗಿ ನಡೆಯುವ ಪಕ್ಷದಲ್ಲಿ ಹೆಚ್ಚಾಗಿ ಹಣ್ಣುಗಳನ್ನೂ, ಕಾಯಿಪಲ್ಯಗಳನ್ನೂ, ಮೈದಾ ಹಿಟ್ಟಿನ ಬದಲಾಗಿ ಗೋಧಿ ಮತ್ತು ಅಕ್ಕಿಯ ರೊಟ್ಟಿಯನ್ನೂ, 4—6 ಲೋಟ ನೀರನ್ನೂ ಸೇವಿಸಬೇಕು. ಯಾವ ಅಸ್ವಸ್ಥತೆಯುನ್ನಾದರೂ ಲಕ್ಷ್ಯಕ್ಕೆ ತಾರದಿರಬಹುದು. ಆದರೆ ಈ ಮಲಬದ್ಧತೆಯನ್ನು ಅಲಕ್ಷ್ಯಮಾಡಬಾರದು. 'ಪೆರಾಫಿನ್' ಎಂಬ ಖನಿಜ ತೈಲವನ್ನು ಮಲ ಬದ್ಧತೆಗೆ ನಿರವಾಯವಾದ ಔಷಧವನ್ನಾಗಿ ಉಪಯೋಗಿಸಬಹುದು. ಮೈಯಲ್ಲಿ ತಕ್ಕಷ್ಟು ತೂಕವಿಲ್ಲದೆ ತೆಳ್ಳಗಿರುವ ಶರೀರ ಪ್ರಕೃತಿಯುಳ್ಳವರಾದರೆ ಬಾದಾಮಿ ಅಥವಾ ಆಲಿವ್ ಎಣ್ಣೆಯಂತ ಹೆಚ್ಚಟ್ಟಿಗೆ ತೆಗೆದುಕೊಳ್ಳುವ ಎಣ್ಣೆಗಳನ್ನೇ ಧಾರಾಳವಾಗಿ ಉಪಯೋಗಿಸುತ್ತ ಬರಬಹುದು.

'ರಾ. ಬ.'

ನಾಗರಿಕ ಸ್ವಾತಂತ್ರ್ಯ ಸಂಘ.

ಇಂಥ ಹೆಸರಿನದೊಂದು ಅಖಿಲ ಭಾರತ ಸಂಘವನ್ನು ಸ್ಥಾಪಿಸುವ ಉದ್ದೇಶದಿಂದ ಕಾಂಗ್ರೆಸು ಅಧ್ಯಕ್ಷರಾದ ಜವಾಹರಲಾಲರು ಒಂದು ಪ್ರಕಟಣೆಯನ್ನು ಹೊರಡಿಸಿರುವರು. ಇತ್ತೀಚಿಗೆ ನಾಗರಿಕ ಸ್ವಾತಂತ್ರ್ಯವನ್ನು ಅಲ್ಲಗಳೆಯುವ ಪ್ರಯತ್ನಗಳು ಒಹು ವಿಧವಾಗಿ ನಡೆಯುತ್ತಿರಲು ಅದನ್ನು ತಡೆಯುವುದಕ್ಕೆ ಜಾತಿಮತ ರಾಜಕೀಯ ಅಭಿಪ್ರಾಯಭೇದವೇನಿದ್ದರೂ ಎಲ್ಲರೂ ಐಕ್ಯಗೊಂಡು ಜಳವಳ ನಡಿಸಬೇಕಾದುದರಿಂದ ಈ ಸಂಘಕ್ಕೆ ಸದಸ್ಯರಾಗಲು ಸಮ್ಮತಿಯುಳ್ಳವರು ತಮ್ಮ ಅಭಿಪ್ರಾಯವನ್ನವರಿಗೆ ತಿಳಿಸಬೇಕಾಗಿ ಒಯಸಿರುವರು. ಹಿಂದೂ ಮಹಾಸಭೆಯ ಭಾಯಿಪರಮಾನಂದರು ಸಂಘದ ಉದ್ದೇಶವನ್ನು ಶ್ಲಾಘಿಸಿ ತಾವು ಸಹಕರಿಸುವುದಾಗಿ ತಿಳಿಸಿದ್ದಾರೆ.

ಕೊಡಗು

ಮೇ ತಾ. ೯ನೇ ಶುಕ್ರವಾರ ೧೯೩೬.

ಬಲವೇ ನ್ಯಾಯವೇ!

ಅಬಿಸೀನಿಯೂದ ಯುದ್ಧದಲ್ಲಿ ಇತ್ತೀಚೆಗೆ ಬದಲಾವಣೆಗಳು ಬಹು ಶೀಘ್ರದಲ್ಲಿ ಆಗಿವೆ. ೯ ತಿಂಗಳಿಂದ ನಿಧಾನವಾಗಿ ನಡೆಯುತ್ತಾ ಬಂದ ಯುದ್ಧದಲ್ಲಿ ಇಷ್ಟು ಬೇಗನೆ ಜಯ, ಅಪಜಯವು ಗೊತ್ತಾಗುವುದೆಂದು ನಿರೀಕ್ಷಿಸಲಾಗಿರಲಿಲ್ಲ. ಆದರೂ ಕೂಡ ಆಧುನಿಕ ಶಸ್ತ್ರೋಪಕರಣಗಳಿಂದ ಕೂಡಿ, ದೀರ್ಘ ಕಾಲ ತರಬೇತು ಹೊಂದಿ, ಕದನಕ್ಕೆ ಸುಸಜ್ಜಿತವಾದ ಇಟೆಲಿಯ ಪ್ರಬಲವಾದ ಸೈನ್ಯದ ಮುಂದೆ ಹೆಚ್ಚಿನ ಶಸ್ತ್ರಗಳಿಲ್ಲದ ಮಕ್ಕು ಜನಾಂಗಗಳ ಕೂಟದ ಸಹಾಯದ ಧೈರ್ಯದಿಂದ ನ್ಯಾಯವಾದ ತರಬೇತೂ ಕೂಡ ಇಲ್ಲದ ಇತೋಪಿಯದ ಸೈನಿಕರು ದೀರ್ಘ ಕಾಲ ಹೋರಾಡಲಾರರೆಂದು ಕಂಡುಬರುತ್ತಿತ್ತು. ಅದಲ್ಲೂ ನಾಗರೀಕತೆಯ ನೀತಿಯನ್ನೇ ಮೂಲೆಗೊತ್ತಿ, ಹೆಂಗಸರು ಮಕ್ಕಳ ಮೇಲೆ ವಿಷವಾಯುವನ್ನು ಹರಡಿದ ಇಟೆಲಿಯವರ ಅನಾಗರಿಕ ಕೃತ್ಯದ ಮುಂದೆ ವೀರ ಇತೋಪಿಯನರ ಭುಜ ಒಲವು ಮುರಿದು ಹೋಯಿತು. ಪ್ರಾರಂಭದಲ್ಲಿ ಅಬಿಸೀನಿಯದವರು ಯುದ್ಧೋಪಕರಣಗಳಲ್ಲಿ ತಮ್ಮ ಕೊರತೆಯನ್ನರಿತು ಸಾಧ್ಯವಾದಷ್ಟು ಮಟ್ಟಿಗೆ ಬೆಟ್ಟ ಗುಡ್ಡ ಪ್ರದೇಶಗಳಿಗೆ ಹಿಂದಿರುಗಿ, ಅಲ್ಲಿಂದ ದೊರತಾಗ ಇಟೆಲಿಯವರಿಂದಿಗೆ ಕೈಚೆಳಕಾಳಗವನ್ನು ಮಾಡುತ್ತಾ ಬಂದರು. ಸ್ವಲ್ಪ ಸಮಯ ದಾಟಿದ ನಂತರ ಇಟೆಲಿಯವರು ದೇಶದ ಒಳಕ್ಕೆ ತಕ್ಕಷ್ಟು ಮಟ್ಟಿಗೆ ನುಗ್ಗಿದ ಮೇಲೆ ಇತೋಪಿಯನರು ಅವರನ್ನು ಎದುರಿಸಿ ಒಲವಾದ ಕದನಗಳಲ್ಲಿ ಅವರನ್ನ ಹಲವು ಕಡೆ ಸೋಲಿಸಿದರು. ಇದನ್ನು ನೋಡಿ ಸಹಿಸಲಾರದ ಇಟೆಲಿಯನ ಯುದ್ಧದ ನೀತಿಗೆ ವಿರುದ್ಧವಾಗಿ ಬಾಂಬುಗಳ ಮೂಲಕ ವಿಷ ಗಾಳಿಯನ್ನು ಇತೋಪಿಯನರ ಮೇಲೆ ಹರಡಲಾರಂಭಿಸಿದರು. ಇದರ ಭಯಂಕರವಾದ ಅಪಾಯಗಳಿಂದ ಪಾರಾಗಲು ಇತೋಪಿಯನರಿಗೆ ಸಾಧ್ಯವಾಗಲಿಲ್ಲ. ಅಬಿಸೀನಿಯೂದ ಚಕ್ರವರ್ತಿಯವರು ತಮ್ಮ ದೇಶದ ಸ್ವಾತಂತ್ರ್ಯವನ್ನು ಕಾಪಾಡಲು ತಾವೇ ಯುದ್ಧರಂಗಕ್ಕೆ ಹೋದರು. ಕಿರಣರಂಗದಲ್ಲಿ ಒಲವಾದ ಸೈನ್ಯವೊಂದನ್ನು ನಡಸಿ ಕದನದಲ್ಲಿ ಭಾಗವನ್ನೂ ವಹಿಸಿದರು. ಹೀಗೆ ರಣರಂಗಕ್ಕೆ ಇಳಿದು ಕದನದಲ್ಲಿ ಖುದ್ದಾಗಿ ಭಾಗವಹಿಸಿದ ಚಕ್ರವರ್ತಿಗಳು ಯಾ ಅರಸರು ಅನೇಕ ವರ್ಷಗಳ ಹಿಂದೆ ಆಗಿ ಹೋದಂಲ್ಲದೆ ಇತ್ತೀಚೆಗೆ ಇಲ್ಲವೆಂದರೆ ತಪ್ಪಾಗಲಾರದು. ಇಟೆಲಿಯವರ ದೃಷ್ಟಿಯೆಲ್ಲವೂ ನೇಗಸರವರ ಮೇಲೆಯೇ ಇತ್ತು. ಅವರು ಹೋದ ಕಡೆಯಲ್ಲೆಲ್ಲಾ ಇಟೆಲಿಯ ವಿಮಾನಗಳು ಅವರನ್ನು ಹುಡುಕುತ್ತಾ ಹೋಗುತ್ತಿದ್ದವು. ಚಕ್ರವರ್ತಿಯವರು ಎಸೆಗುಂದದೆ ಅಂಥಾ ವಿಮಾನಗಳಿಗೆ ತೋಪುಗಳನ್ನು ಹಾರಿಸುತ್ತಿದ್ದರು ಒಮ್ಮೆ ಬಾಂಬಿನ ಹೊಡೆತದಿಂದ ಅವರ ಬಳಿ ಇದ್ದ ಕಾವಲುಗಾರನು ಮೃತನಾಗಿ ನೇಗಸರು ಪ್ರಪ್ಪದಲ್ಲಿ ಅಪಾಯದಿಂದ ಪಾರಾದರು. ಇಪ್ಪತ್ತರಲ್ಲಿ ವಿಷ ಗಾಳಿಯ ಪ್ರಯೋಗದಿಂದ ಇಟೆಲಿಯವರ ಧಾಳಿಯು ಪ್ರಬಲವಾಗುತ್ತಿದ್ದಂತೆ ಒಂದು ಅರಸು ಮುಖ್ಯ ಪಟ್ಟಣವಾದ ಅಡ್ಡಿಸ್ ಅಬಾಬಾ ಕಡೆ ಸಾಗಿದರು. ಇದನ್ನು ನೋಡಿದ ಚಕ್ರವರ್ತಿಯವರು ಉತ್ತರ ರಣರಂಗವನ್ನು ಬಿಟ್ಟು ಮುಖ್ಯ ಪಟ್ಟಣಕ್ಕೆ ಹಿಂತಿರುಗಿದರು. ಇಟೆಲಿಯ ಸೈನ್ಯವು ಅಡ್ಡಿಸ್ ಅಬಾಬಕ್ಕೆ ಸಮೀಪಿಸುತ್ತಿರುವೆಯೆಂದೂ, ಮುಖ್ಯ ಪಟ್ಟಣವು ಅವರ ವಶವಾಗುವುದು ಖಂಡಿತವೆಂದೂ ವಾರ್ತೆ ಹಬ್ಬಿತು. ಅದರೂ ಕೂಡ ನೇಗಸರು ಧೈರ್ಯಗುಂದದೆ ಜನಾಂಗಗಳ ಕೂಟವನ್ನು ನಂಬಿ ಇಟಲಿಯವನ್ನು ತಡೆಯಲು ಸೈನಿಕರನ್ನು ಹುರಿದುಂಬಿಸಿದರು. ಅವರು ಆ ಪಟ್ಟಣವನ್ನು ಬಿಡುವುದು ಉಕ್ತವೆಂದು ಅವರಿಗೆ ಮುಖ್ಯ ಮಂಡಳಿಯವರು ಸಲಹೆ ಕೊಟ್ಟರೂ ಕೂಡ ಅವರು ಕಡೆಯ ವರೆಗೂ ತನ್ನ ರಾಜಧಾನಿಯನ್ನು ಬಿಡಬೇಡವೆಂದು ಮೊಂಡು ಮಾಡಿ ಕುಳಿತರು. ಆದರೆ ಅವರು ಮೇ ತಾರೀಕು 2ನೆ ರಾತ್ರಿ ಫ್ರೆಂಚ್ ಕಂಪನಿಯೊಂದರ ಪ್ರಯಾಣದಲ್ಲಿ ಅಡ್ಡಿಸ್ ಅಬಾಬದಿಂದ ಫ್ರೆಂಚರ ಪಟ್ಟಣವಾದ ಡ್ಜಿಬೌಟಿಗೆ ಟ್ರೈನು ಹತ್ತಿದರು. ಹೀಗೆ ರಾಜಧಾನಿಯನ್ನು ಬಿಡುವ ಮುಂಚೆ ಸರ್ಕಾರದ ಅಧಿಕಾರವನ್ನು ಮಂತ್ರಿ ಮಂಡಳಿಯವರಿಗೆ ಒಪ್ಪಿಸಿದರು. ಮಂತ್ರಿ ಮಂಡಳಿಯವರು ಮುಖ್ಯ ಪಟ್ಟಣದಿಂದ ೧೫ ಮೈಲು ದೂರದಲ್ಲಿರುವ ಕೋರಾ ಎಂಬ ಪಟ್ಟಣಕ್ಕೆ ತಮ್ಮ ಆಫೀಸನ್ನು ಬದಲಾಯಿಸಿದರು. ಚಕ್ರವರ್ತಿಯವರು 45 ನಿಮಿಷಗಳಿಂದ ಕೂಡಲೆ ಕುಟುಂಬದವರೊಡನೆ ಡ್ಜಿಬೌಟಿಯಿಂದ ಬ್ರಿಟಿಷ್ ಹಡಗು ಹತ್ತಿ ಹೈಫಾ ಎಂಬಲ್ಲಿ ಹೋಗಿ ಇಳಿದರು, ಅಲ್ಲಿಂದ ಪ್ಯಾಲಸ್ಟೈನಿಗೆ ಹೋಗುವರೆಂದೂ ತಿಳಿಸಲಾಗಿದೆ. ನಂತರ ಲಂಡನ್ನಿಗೆ ಹೋಗಿ ನ್ಯಾಯ ಪಡೆಯಲು ಯತ್ನಿಸಬಹುದೆಂದೂ ಸುದ್ದಿ ಇದೆ. ಇತ್ತಲಾಗಿ ನೇಗಸರು ಬಿಟ್ಟು ಕೂಡಲೇ ರಾಜಧಾನಿಯಲ್ಲಿ ಲೂಟಿಯು ಪ್ರಬಲವಾಗಿ ಹಲವರು ವೃತರಾಗಿರುವುದಲ್ಲದೆ ಆಸ್ತಿ ಪಾಸ್ತಿಗಳೂ ತುಂಬಾ ನಷ್ಟವಾಗಿವೆ. ಇಟಲಿಯ ಸೈನ್ಯವು ನಿರಾತಂಕವಾಗಿ ಪಟ್ಟಣವನ್ನು ಪ್ರವೇಶಿಸಿರುವದ.

ಚಕ್ರವರ್ತಿಯವರು ಅಬಿಸೀನಿಯೂವನ್ನು ಬಿಟ್ಟದ್ದರಿಂದ ಮುಂದಿನ ಪರಿಣಾಮವೇನಾಗುವುದೆಂದು ಹೇಳುವುದು ಸುಲಭವಲ್ಲ. ನೇಗಸರು ಒಹು ಧೈರ್ಯದಿಂದ ತನ ದೇಶದ ಸ್ವಾತಂತ್ರ್ಯವನ್ನು ಕಾಪಾಡಲು ಪ್ರಯತ್ನಿಸಿದರೆಂಬುದರಲ್ಲಿ ಸಂಶಯವಿಲ್ಲ. ಇನ್ನು ಅವರು ಇಟಲಿಯವರ ಕೈಗೆ ಸಿಕ್ಕಿ ಅಪಮಾನಿತರಾಗುವುದಕಿಂತಲೂ, ಅಥವಾ ರಣರಂಗದಲ್ಲಿ ಸತ್ತು ತನ್ನ ದೇಶದ ಸ್ವಾತಂತ್ರ್ಯವನ್ನು ಸಂಪೂರ್ಣ ಕಳಕೊಳ್ಳುವುದಕ್ಕಿಂತಲೂ ತತ್ಕಾಲ ದೇಶವನ್ನಾದರೂ ಬಿಟ್ಟು ಹೊಂಗಿಸ್ದುಕೊಂಡು ಸಂಧಾನಗಳಿಂದ ತನ ದೇಶಕ್ಕೆ ಏನಾದರೂ ಪ್ರಯೋಜನ ಮಾಡಿಕೊಳ್ಳಬಹುದೆಂಬ ಅಭಿಪ್ರಾಯದಿಂದ ಅವರು ತನ್ನ ಮೊದಲಿನ ತೀರ್ಮಾನವನ್ನ ಬದಲಾಯಿಸಿದ್ದಾಗಿರಬಹುದು. ಹೇಗೂ ನ್ಯಾಯವಾದ ಕಾರಣವೇನೂ ಇಲ್ಲದೆ, ಇಟಲಿಯ ಸಾಮ್ರಾಜ್ಯ ಸಂಪಾದನೆ ಏದುರ ಶೇಗಾಗಿ ಅಬಿಸೀನಿಯದ ನೇಗಸರು ಅವರ ದೇಶ ಬಿಟ್ಟು ಹೊರಗೆ ಹೋಗಬೇಕಾಗಿ ಬಂದದ್ದು ದೊಡ್ಡ ಅನ್ಯಾಯ ವೆಂಬುದರ ಬಗ್ಗೆ ಸಂಶಯವಿಲ್ಲ. ಇದರ ಪರಿಣಾಮವು ಮುಂದೇನಾಗುವುದೆಂದು ನೋಡುವ.

ಇಟಲಿಯ ಸೈನ್ಯವು ಇತೋಪಿಯದ ರಾಜಧಾನಿಯನ್ನು ಪ್ರವೇಶಿಸುವಷ್ಟರಲ್ಲೇ ಇಟಲಿಯ ರಾಜಧಾನಿಯೂದ ರೋಮಿನಲ್ಲಿ ಅಲ್ಲಿಯ ಸರ್ವಾಧಿಕಾರಿ ಮುಸ್ಸೊಲಿನಿಯವರು ಜನರಿಗೆ ಸಂತೋಷಸೂಚಕವಾದ ದೊಡ್ಡ ಮೆರವಣಿಗೆಯನ್ನು ನಡಿಸಿ, ನೆರೆದಿದ್ದವರಿಗೆ ಮಾಡಿದ ಭಾಷಣದಲ್ಲಿ ಹೀಗೆಂದಿರುವರು:—'ರೋಮಿನ ಖಡ್ಗದಿಂದ ಜಯಿಸಿದ ಕಾರಣ ಅಬಿಸೀನಿಯವು ತಮ್ಮ ಹಕ್ಕಿನದ್ದಾಗಿದೆ. ಅದನ್ನು ಯಾವ ಸಿದ್ಧಾಂತದಿಂದ ನೆಡ್ದಿರುವೆವೋ ಅದೇ ಧೃಢತೆಯಿಂದ ಆ ಜಯವನ್ನು ಕಾಪಾಡುವ ಕಯಾರಿಯಲ್ಲಿವೆವು.' ಇಟಲಿಯ ಸರ್ವಾಧಿಕಾರಿಯು ಈ ಹೆಮ್ಮೆಯ ಮಾತುಗಳು ಜನಾಂಗಗಳ ಕೂಟವನ್ನು ಎಷ್ಟು ಅಪಹಾಸ್ಯಕ್ಕೆ ಇಳಿಸಿದೆಯೆಂಬುದನ್ನು ಏನೆಂದು ಹೇಳಬೇಕಾಗಿಲ್ಲ. ಕಳೆದ ಫೆಬ್ರವರಿ ಯುದ್ಧದ ಶಸ್ತ್ರಾಸ್ತ್ರವನ್ನೇ ನಿಲ್ಲಿಸಿ, ಚಿಕ್ಕ ರಾಷ್ಟ್ರಗಳ ಮೇಲೆ ದೊಡ್ಡವಗಳು ಧಾಳಿ ನಡಿಸದಂತೆ ಮಾಡಲಿಕ್ಕಾಗಿಯೇ ಜನಾಂಗಗಳ ಕೂಟವು ಸ್ಥಾಪಿಸಲ್ಪಟ್ಟದ್ದಾಗಿದೆ. ಈ ಕೂಟದ ಸದುದ್ದೇಶವನ್ನ ನಂಬಿಯೇ ಅಬಿಸೀನಿಯವು ಯುದ್ಧದ ತಯಾರಿಯನ್ನುಮಾಡದೆ ಸುಮ್ಮನಿದ್ದುದಾಗಿದೆ ಆದರೆ ಈ ಕೂಟದ ಸ್ಥಾಪನೆಯ ಒಬ್ಬ ಪ್ರಾಮುಖ್ಯ ಮೆಂಬರಾದ ಇಟಲಿಯು ಯದ್ಧಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡು ಆ ಕೂಟದ ಇನ್ನೊಬ್ಬ ಬಲಹೀನ ಮೆಂಬರಾದ ಅಬಿಸೀನಿಯೂದ ಮೇಲೆ ನ್ಯಾಯವಾದ ಕಾರಣವೇನೂ ಇಲ್ಲದೆ ಧಾಳಿಯನ್ನು ನಡಿಸಿತು. ಆದರೂ ಕೂಡ ಜನಾಂಗಗಳ ಕೂಟದವರು ತಮ್ಮನ್ನು ಪೂರ್ತಿ ನಂಬಿದ್ದ ಇತೋಪಿಯಕ್ಕೆ ಬೇಕಾದ ಸಹಾಯ ಕೊಡದೆ. ಕಮಿಟಿ, ಕವ್ಯುನ್ಸಿಲುಗಳ ನಿರ್ಣಯಗಳನ್ನು ಮಾಡುತ್ತಾ ದಿನ ನೂಕಿತ್ತಾ, ಒಂದು, ನೆರವಾತ್ಯಕ್ಕೆ ಇಟಲಿಯ ಮೇಲೆ 'ಸ್ಯಾಂಕ್ಷನ್' ಗಳನ್ನು ಹಾಕಿ, ಬಳಿಯ ಇಟಲಿಯು ಕಪ್ಪು ಅಬಿಸೀನಿಯೂದ ಮೇಲೆ ತನ್ನ ಧ್ವಜವನ್ನು ಹಾರಿಸಲು ಸಹಾಯ ಮಾಡಿತು; ದೊಡ್ಡ ವಿಷನು ಸಂಣ ವಿಷನ್ನು ನುಂಗುವ ತತ್ವಕ್ಕೆ ಸಂಪೂರ್ಣ ಬೆಂಬಲವನ್ನಿತ್ತಿತು. ಇದರಿಂದ ರಾಷ್ಟ್ರಗಳ ಕೂಟವು ಇತೋಪಿಯಕ್ಕೆ ದೊಡ್ಡ ವೇಸ ಮಾಡಿತು ಎಂಬುದರಲ್ಲಿ ಸಂದೇಹವೇನೆನಿದೆ? 'ನ್ಯಾಯವೆ ಬಲ' ಎಂಬುದನ್ನು ಸಾಧಿಸುವುದೇ ನಾಗರೀಕತೆಯ ಗುರಿಯೂ ಆಗಬೇಕು. ಅದಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿ ಇಟಲಿಯು 'ಬಲವೇ ನ್ಯಾಯ' ಎಂಬ ಕಾಡು ಜನರ ತತ್ವವನ್ನು ಸ್ಥಾಪಿಸಲು ಯತ್ನಿಸಿರುವರು, ಇದಕ್ಕೆ ರಾಷ್ಟ್ರಗಳ ಸಭೆಯು ಸಹಾಯ!

ಇಂದು, ಅಬಿಸೀನಿಯವು ಕಪ್ಪು ಜನವಾದರಿಂದ ಬಿಳೀ ಜನಾಂಗವಾದ ಇಟೆಲಿಯ ಅನಾಗರೀಕ ತತ್ವವನ್ನು ಜಾರಿಗೆ ತರಲು ಜನಾಂಗಗಳ ಕೂಟವು ಬಿಟ್ಟಿರಬಹುದು. ಆದರೆ ಅದರಿಂದ ಆ ಕೂಟವು ಉದ್ದೇಶದ ಸಂಶಯವಾಗಿ ಕೂಟದ ಪ್ರಾರಂಭಕೆಯೇ ವ್ಯರ್ಥವಾಯಿತು. ಈ ಸಂಘಟನೆಯು, ಮುಂದುರಿದು ಮೂಲ ಉದ್ದೇಶವೇ ಜನಾಂಗಗಳಲ್ಲಿ ನ ವಿಶ್ವಾಸವಿದಲಿಯೂ ಅದು ಏನು ಮಾಡಲಾರದಾಗುವುದು. ಇಟಲಿಯು ಜನಾಂಗಗಳ ಕೂಟವನ್ನು ಧಿಕ್ಕರಿಸಿ ಅಬಿಸೀನಿಯೂದ ಮೇಲೆ ಪ್ರಯೋಗ ನೇಲೆ ಜಯ ಪತಾಕೆಯನ್ನು ಹಾರಿಸಿದ ಹೇಲಾ ಚಾಮ್ಬರ್ಲಿನ್, ಫ್ರಾನ್ಸ್ ಮೊದಲಾದ ಜನಾಂಗಗಳು ಕಣ್ಣು ಬಿಟ್ಟುಂಡಿರಣ ತ್ಮ. ಅಬಿಸೀನಿಯವನ್ನು ಪೂರ್ತಿ ಇಟಲಿಗೆ ಬಿಟ್ಟು ಕೊಡಬೇಕೋ ಯಾ ಅಮಿಲ್ಲಿ ತಮ್ಮ ಪಾಲಿಗೆ ಬಂದಷ್ಟನ್ನು ಉಳಿಸಿಕೊಳ್ಳಬೇಕೋ ಎಂಬುದೇ ಈ ಜನಾಂಗಗಳ ಮುಂದಿರುವ ಸಮಸ್ಯೆ. ಈ ವಿಚಾರವು ಕೆಲವು ವಾರಗಳ್ಳಿಯೇ ತೀರ್ಮಾನವಾಗಬಹುದು. ಹೇಗಾದರೂ ಜನಾಂಗಗಳ ಕೂಟವು ಅಬಿಸೀನಿಯಕ್ಕೆ ತನ್ನ ಕರ್ತವ್ಯವನ್ನು ಮಾಡುವಲ್ಲಿ ಪೂರ್ತಿ ತನ್ನ ಅಸ್ತಿತ್ವಕ್ಕೆ ದೊಡ್ಡ ಅಪಾಯವನ್ನೂ ಮಾಡಿದೆ ಎಂಬುದರಲ್ಲಿ ಸಂಶಯವಿಲ್ಲ. ಇದರ ಪರಿಣಾಮವು ಮುಂದೇನಾಗುವುದೆಂದು ನೋಡುವ.

ಕೊಡಗು ಹರಿಜನ ಸೇವಾ ಸಂಘದ ವಾರ್ಷಿಕದ ಲೆಕ್ಕ.

ಹರಿಜನ ಸೇವಾ ಸಂಘದ ಲೆಕ್ಕದ ವರ್ಷವು ಅಕ್ಟೋಬರಿನಿಂದ ಪ್ರಾರಂಭವಾಗುತ್ತದೆ ಪ್ರತೀ ತಿಂಗಳು ಆಯ ಖರ್ಚಿನ ಲೆಕ್ಕವು ತಿಂಗಳು, ಕಳೆದ ನಂತರವೂ, ಆಯ ತಿಂಗಳಿಗೊಮ್ಮೆಯೂ ವರ್ತಮಾನ ಪತ್ರಿಕೆಯೊಮ್ಮೆಯಾದರೂ ಪ್ರಕಟವಾಗಬೇಕೆಂಬ ನಿಯಮವಿರುವುದರಿಂದ ಹಾಗೆ ಪ್ರಕಟಿಸಲ್ಪಡುತ್ತಿದೆ ಹಾಗೆ ಪ್ರಕಟಿಸಿದ 1935 ನೇ ಅಕ್ಟೋಬರಿನಿಂದ 1936 ನೇ ಮಾರ್ಚಿ ಆಖೈರು ವರೆಗಿನ ಲೆಕ್ಕವು ಕೆಳಗೆ ಕೊಡಲಾಗಿದೆ

ಜಮಾ.

	ರೂ.	ಆ.	ಪೈ.
1. ಹಿಂದಿನ ಸಿಲ್ಕ	190	3	2
2. ಸ್ಥಳೀಯ ಉಚಿತಾರ್ಥ ಧನ	20	15	3
3 ಗಾಂಧಿಜಿ ಸರ್ವ ಫಂಡಿನಿಂದ ಸಂತತಿಗೆ	224	1	6
4. ಡಘುಮಾಲ್ ಸ್ಕಾಲರ್ ಶಿಪ್ ಸಿಕ್ಕಿದ್ದು	12	0	0
ಜುಮ್ಲ.	447	3	11

ಖರ್ಚು.

1. ಪ್ರಯಾಣ ಭತ್ಯ	1	12	0
2 ಸ್ಟಾಂಪು ಖರ್ಚು	0	3	9
3 ಅರಮೇರಿ ಮತ್ತು ಜೆನ್ನಪ್ಪನ ಕೋಟೆ ಶಾಲೆಗಳಿಗೆ ನಂತರಿಗೆ	125	0	0
4 ದಿನ ಸೇವಾಶ್ರಮದ ಖರ್ಚು*	188	0	0
5. ಸ್ಕಾಲರ್ ಶಿಪ್	6	0	0
6. ತಿಳ್ಳಮನೆ ಹರಿಜನರಿಗೆ ಪ್ಲೇಗಿನ ಸಮಯದಲ್ಲಿ ಅಕ್ಕಿ ಬೆಳ್ಳಗೆ ಹಂಚಿದ್ದು	5	14	1
7. ದಜಿ ಕ್ವಾಸಿನ ಖರ್ಚು	41	4	0
8 ಡಘುಮಾಲ್ ಸ್ಕಾಲರ್ ಶಿಪ್ ಕೊಟ್ಟದ್ದು	24	0	0
ಜುಮ್ಲ.	392	1	10
ಒಟ್ಟು ಜಮಾ	447	3	11
,, ಖರ್ಚು	392	1	10
	55	2	1

*ದಿನಸ್ತುವಿನ ಖರ್ಚಿನ ವಿವರ.

1. ಅಚಾಮರ ಸಂಬಳ (6 ತಿಂಗಳಿಗೆ)	30	0	0
2 ದೀಪ, ಸ್ವಚ್ಛತೆ ವಗೈರೆ	6	4	3
3. ಊಟದ ಖರ್ಚು	102	10	7
4 ಪುಟ್ಟಕ್ಕ ಸ್ನೇಲು ವಗೈರೆ	8	15	8
5 ಕಂತಿ ಬೋಲಿ, ಚಿಕ್ಕ ಕೆರೆ ವಗೈರೆಗೆ	40	4	6
ಜುಮ್ಲ.	188	0	0

ಪ್ರತೀ ತಿಂಗಳು ಕಳೆದ ನಂತರ ಇಲ್ಲಿಯ ಲೆಕ್ಕವನ್ನು ಅಚ್ಚಾದ ಫಾರಮಿನಲ್ಲಿ ಒಕ್ಕೂಟ ಹರಿಜನ ಸೇವಾ ಸಂಘವು ಕರ್ನಾಟಕ ಪ್ರಾಂತೀಯ ಬೋರ್ಡಿನ ಪ್ರೆಸಿಡೆಂಟರ ಮೂಲಕ ಪೆಡ್ಡಿಫೀಸಾದ ಡೆಲ್ಲಿಗೆ ಕಳುಹಿಸಿದ ನಂತರವೇ ಗಾಂಧಿಜಿ ಪರ್ಸ್ ಫಂಡಿನಿಂದ ಇಲ್ಲಿಗೆ ಹಣ ಬರುವುದಾಗಿದೆ. ಈ ವರ್ಷ ಪ್ರಾರಂಭದಿಂದ ಅಂದರೆ 1935 ನೇ ಅಕ್ಟೋಬರಿನಿಂದ ಇಲ್ಲಿ ಖರ್ಚಾದ ಶೇಕಡ 50 ರಷ್ಟು ಮಾತ್ರ ಗಾಂಧಿಜೀ ಪರ್ಸ್ ಫಂಡಿನಿಂದ ಕೊಡುತ್ತಿದ್ದರು. ಉಳಿದ ಶೇಕಡ 50 ರಷ್ಟನ್ನು ಇಲ್ಲಿಯೇ ವಸೂಲಿಮಾಡಬೇಕೆಂದು ಹೇಳಿದ್ದರು ಆದರೆ ಇಲ್ಲಿ ವಸೂಲಾತಿಯು ಒಹು ಕಷ್ಟವೆಂದೂ, ಖರ್ಚಿನ ಅರ್ಧ ಭಾಗ ಮಾತ್ರ ಹೆಡ್ಡಾಫೀಸಿನಿಂದ ಕೊಡುವದಾಗಿ ಇದ್ದು ಕೆಲಸಗಳನ್ನು ನಡಿಸಿದ್ದುದು ಅಸಾಧ್ಯವಾಗಿರುವುದೆಂದೂ ಹೆಚ್ಚು ಸಾರಿ ಒತ್ತಿ ಬರೆದಿದ್ದರಿಂದ ಈ ಖರ್ಚಿನ ಶೇಕಡ 75 ರಷ್ಟು ಹೆಡ್ಡಾಫೀಸಿನಿಂದ ಕಳುಹಿಸಲು ಒಪ್ಪಿರಬಹುದಾಗಿದೆ. ಇನ್ನು ಕೂಡ ಗಾಂಧಿಜಿಗೆ ತೋರಿಸುವಂಥ ಹೆಚ್ಚಿನ ರಿಯಾಯಿತಿಯನ್ನು ಗಿಸಿ. ಬಾಕಿ ಶೇಕಡ 25 ರಷ್ಟನ್ನು ಇಲ್ಲಿಯೇ ವಸೂಲಿಮಾಡಬೇಕಾಗಿದೆ ಕಳೆದ ವರ್ಷ ಕೊಟ್ಟಿದ್ದ ಹಣದಲ್ಲಿ ಖರ್ಚಾಗದೆ 190—3—2 ಉಳಿದಿದ್ದುದರಿಂದ ಇಲ್ಲಿಯವರಿಗೆ ಸ್ಥಳೀಯ ವಸೂಲಿ ಸಾಕಷ್ಟು ಆಗದಿದ್ದರೂ ತೊಂದರೆಕ್ಕೆ ಹಣದ ಅವಶ್ಯಕತೆಯಿರಲಿಲ್ಲ, ಆದರೆ ಕಳೆದ ವರ್ಷದ ಸಿಲ್ಕನ್ನು ಈ ವರ್ಷ ಸ್ಥಳೀಯ ವಸೂಲಾತಿ ಒದಲು ಉಪಯೋಗಿಸಕೂಡದಿತ್ತಲು, ದಾಖಲಾತಿಯ ಮೇರೆ, ದೇರ ಕಡತಗಳನ್ನು ಮಾಡಿತ್ತಿರುವುದರಿಂದಲೇ ಇಲ್ಲಿಯೂ ಸ್ಥಳೀಯ ವಸೂಲಾತಿಯನ್ನು ಕೂಡಲೇ ಜೇಕೆಂತಲೂ ಹೆಡ್ಡಾಫೀಸಿನವರು ತಾಕೀತು ಮಾಡಿದ್ದರಿಂದಲೂ ಅಂದರೆ ಶೇಖಡ 50 ರಷ್ಟು ಉದಾರವಾಗಿಸಿಸಿಯೂ ತಮ್ಮ ಸೈಯ್ಯಲಕಾಗಿ ಧನ ಸಹಾಯವನ್ನು ಕೊಟ್ಟಿದ್ದು ಬಡ ಹರಿಜನರು ಉದ್ಧಾರವಾಗಬೇಕೆಂಬ ಸದುದ್ದೇಶದಿಂದಲೇ ಅಲ್ಲವೆ ಸಾರ್ವಜನಿಕರು ಸಹಾಯ ಮಾಡಿರುವುದು ಎಂಬುದನ್ನು ಮರೆಯಬಾರದು.

ಮಡಿಕೇರಿ,
ತಾ. 25-4-'36.

ಪಿ. ಐ. ಪಳ್ಳಿಪ್ಪ,
(ಸ್ಥಳೀಯ ಕಾರ್ಯದರ್ಶಿ.)

Supplement to this issue 8-5-1936

"ಇದರ ನಕಲೊಂದು ಜಾಯಿಂಟ್ ಕಂಪೆನಿ ರಿಜಿಸ್ಟ್ರಾರರಲ್ಲು ದಾಖಲ್ಮಾಡಿದೆ"

ರೈತರಿಗೂ ಪಾಲುದಾರರಿಗೂ ಅಪೂರ್ವ ಲಾಭ!

ಯಾವ ವ್ಯಾಪಾರಕ್ಕೂ ಮಧ್ಯೆ ಕಮಿಶನ್ ಏಜಂಟರುಗಳು ಇದ್ದರೆ ಒಂದು ಕಡೆ ಸಾಮಾನನ್ನು ಮಾರುವವರು ಕಡಿಮೆ ಕ್ರಯ ಪಡೆದುಕೊಳ್ಳಬೇಕಾಗುತ್ತದೆ,—ಇನ್ನೊಂದು ಕಡೆ ಸಾಮಾನನ್ನು ಕೊಂಡುಕೊಳ್ಳುವವರು ಹೆಚ್ಚಿನ ಕ್ರಯ ಕೊಟ್ಟು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಮಾರುವವರ ಮತ್ತು ಕೊಂಡುಕೊಳ್ಳುವವರ ನಿಸ್ಸಹಾಯಕತ್ವದಿಂದ ಕಮಿಶನ್ ಏಜಂಟರುಗಳು ಲಾಭ ಪಡೆಯಬೇಕು. ಆದುದರಿಂದ ಮಾರುವವರಿಗೆ ಹೆಚ್ಚಿನ ಬೆಲೆಯು ಸಿಕ್ಕುವುದಕ್ಕೂ ಕೊಂಡುಕೊಳ್ಳುವವರಿಗೆ ಅದಷ್ಟು ಕಡಿಮೆ ಕ್ರಯಕ್ಕೆ ಸಿಕ್ಕುವುದಕ್ಕೂ ಮಧ್ಯೆ ಕಮಿಶನ್ ಏಜಂಟರುಗಳು ಇರಕೂಡದು.

ಈ ಪ್ರಯೋಜನವು ಸಿಕ್ಕುವುದಕ್ಕಾಗಿ

ವೀರರಾಜೇಂದ್ರಪೇಟೆಯಲ್ಲಿ

ದಿ ಕುರ್ಗ್ ಪ್ರಾಡ್ಯೂಸ್ ಎಂಡ್ ಕಾಮರ್ಸ್, ಲಿಮಿಟೆಡ್

ಎಂಬ ಕಂಪೆನಿಯನ್ನು ಮೆ|ಗಳಾದ ಬಿ. ಐ ಉತ್ತೈಯ್ಯ, ಎ. ಎಸ್. ರಾಮಯ್ಯ, B.A.,B.L., ಎಂ. ಪಿ. ಜ್ಹೊನ್, ಕೆ.ಯಂ. ಸೋಮೈಯ್ಯ ಮತ್ತು ಅಬೇಲ್‌ವಾಸ್‌ರವರು ಸ್ಥಾಪಿಸಿ ಇದರ ಶಾಖೆಗಳನ್ನು ಕೊಡಗಿನ ಮುಖ್ಯ ಉತ್ಪತ್ತಿಯಾದ ಭತ್ತದ ಮುಖ್ಯ ಗಿರಾಕಿಯಾದ ಮಲಬಾರಿನಲ್ಲಿ ಸ್ಥಾಪಿಸಿರುತ್ತಾರೆ. ಕಂಪೆನಿಯ ಮೇಲ್ಕಂಡ ಸ್ಥಾಪಕರು ಮತ್ತು ಮೆ| ಬೊಪ್ಪಂಡ್ರ ಕುಟ್ಟಪ್ಪನವರು ಕಂಪೆನಿಯ ಪ್ರಥಮ ಡೈರೆಕ್ಟರುಗಳಾಗಿರುವರು. ಭತ್ತವನ್ನು ಕೊಡಗಿನಿಂದ ತೆಗೆದುಕೊಂಡು ಹೋಗಿ ಕಮಿಶನ್ ಏಜಂಟರುಗಳ ಸಹಾಯವಿಲ್ಲದೆಯೇ ನೆಟ್ಟಗೆ ಅದನ್ನು ಅಲ್ಲಿನ ಜನರಿಗೆ ಮಾರುತ್ತಿದ್ದಾರೆ. ಭತ್ತಕ್ಕೆ ಈಗ ಸಿಕ್ಕುತ್ತಿರುವ ಹೆಚ್ಚಿನ ಕ್ರಯವು ಬಹುಮಟ್ಟಿಗೆ ಈ ಕಂಪೆನಿಯ ಪ್ರಯತ್ನದಿಂದಲೇ ಆಗಿದೆ. ತತ್ಕಾಲಕ್ಕೆ ಭತ್ತದ ವ್ಯಾಪಾರವನ್ನು ಮಾತ್ರ ಈ ಕಂಪೆನಿಯು ಮಾಡುತ್ತಿರುವುದಾದರೂ ಕಾಫಿ, ಮೆಣಸು, ಕಿತ್ತಲೆ, ಯಾಲಕ್ಕಿ, ರಬ್ಬರ್ ಮುಂತಾದ ಪ್ರತಿಯೊಂದು ಉತ್ಪನ್ನವನ್ನು ಕೊಂಡುಕೊಂಡು ಪರದೇಶಗಳಲ್ಲಿ ಮಾರುವುದು, ಇತರ ದೇಶಗಳ ಸಾಮಾನುಗಳನ್ನು ತರಿಸಿ ಮಾರುವುದು, ಸಾಮಾನು ಸಾಗಿಸುವುದು, ಇತರ ಕಮಿಶನ್ ಏಜನ್ಸಿಯ ಕೆಲಸ ವಗೈರೆ ಮಾಡುವುದು ಮುಂತಾದುವುಗಳನ್ನೆಲ್ಲ ಮಾಡಬೇಕೆಂದು ನಿಶ್ಚಯಿಸಲ್ಪಟ್ಟಿದೆ. ಮೈಸೂರು ದೇಶದಲ್ಲಿ ಸಹ ಇದರ ಶಾಖೆಗಳು ತೆರೆಯಲ್ಪಡುತ್ತವೆ.

ಲಾಭಕರವಾದ ವ್ಯಾಪಾರ!

ಮಾರುವವರಿಗೆ ಅದಷ್ಟು ಹೆಚ್ಚಿನ ಕ್ರಯ ಕೊಟ್ಟೂ ಚಿಲ್ಲರೆ ಕೊಂಡುಕೊಳ್ಳುವವರಿಗೆ ಅದಷ್ಟು ಕಡಿಮೆ ಕ್ರಯಕ್ಕೆ ಮಾರಿದರೂ ಶುರುವಿನ ವರ್ಷದಲ್ಲೇ ಶೇಕಡ 10ಕ್ಕೆ ಕಡಿಮೆಯಿಲ್ಲದೆ ಲಾಭ ಸಿಕ್ಕಬಹುದೆಂದು ಅಂದಾಜು ಕಟ್ಟಲ್ಪಟ್ಟಿದೆ. ನಂತರ ನಮ್ಮ ಅನುಕೂಲತೆಗಳನ್ನೂ ಪೇಟೆಯ ಧಾರಣೆಗಳನ್ನೂ ನೋಡಿ ಕ್ರಯಗಳನ್ನು ಸರಿಪಡಿಸಿಕೊಂಡರೆ ಇದರ ಎರಡು ಪಾಲಿನಷ್ಟು ಲಾಭ ಸಿಕ್ಕುವುದರಲ್ಲಿ ಸಂಶಯಗಳು ಕಾಣುವುದಿಲ್ಲ.

ಇದಕ್ಕೆ ಪಾಲು ಭಂಡವಾಳವಾದ 50,000 ರೂಪಾಯಿಯೂ ಜಮೆಯಾದಂತೆ ಇದರ ಕೆಲಸಗಳನ್ನು ವಿಸ್ತರಿಸಿ ಲಾಭಕರವಾದ ಪ್ರತಿಯೊಂದು ವ್ಯಾಪಾರವನ್ನೂ ನಡೆಸುತ್ತೇವೆ.

ಒಂದೊಂದು ಪಾಲಿನ ಬೆಲೆಯು 10 ರೂಪಾಯಿಯಾಗಿದೆ. ಪ್ರವೇಶ ಹಾಸಲು 0—4—0, ಪಾಲಿನ ಅರ್ಜಿಯ ಸಂಗಡ ಎರಡು ರೂಪಾಯಿ, ಪಾಲು ಕೊಡಲು ತೀರ್ಮಾನಿಸಿದ ಮೇಲೆ 3—0—0 ಮತ್ತು ಬಾಕಿಯ 5 ರೂಪಾಯಿಗಳನ್ನು ಡೈರೆಕ್ಟರುಗಳು ಕೇಳಿದಾಗ ಸಲ್ಲೆ ಮಾಡುವುದು. ಹೀಗೆ ಈಗಾಗಲೇ 300 ಪಾಲುಗಳು ತೆಗೆದುಕೊಳ್ಳಲ್ಪಟ್ಟಿವೆ. ಐವತ್ತು ಪಾಲುಗಳನ್ನು ತೆಗೆದುಕೊಳ್ಳುವವರು ಡೈರೆಕ್ಟರುತನಕ್ಕೆ ಅರ್ಹರಾಗುತ್ತಾರೆ. ಇದನ್ನು ರಿಜಿಸ್ಟರು ಮಾಡುವ ಮತ್ತು ಇತರ ಶುರುವಿನ ಖರ್ಚುಗಳು ಸುಮಾರು 600—0—0 ರೂಪಾಯಿ ಆಗುತ್ತವೆ. ಕಂಪೆನಿಯ ಒಟ್ಟಾರೆ 5 ಜನ ಸ್ಥಾಪಕರಿಗೆ ಕಂಪೆನಿಯ ನಿವ್ವಳ ಆದಾಯದಿಂದ ಒಟ್ಟಾಗಿ ಶೇಕಡ 15ರಂತೆ ಪಾವತಿಯಾಗತಕ್ಕದ್ದು. ಕೊಡಗಿನ ರಿಟಯರ್ಡ್ ಕಮಿಶನರಾದ ದಿವಾನ್ ಬಹದ್ದೂರ್ ಕೆ. ಚಂಗಪ್ಪನವರೂ, ಎಂ. ಎಲ್. ಸಿ.,ಯವರಾಗಿರುವ ರಾವ್ ಬಹದ್ದೂರ್ ಎ. ಬಿ. ಚಂಗಪ್ಪನವರೂ, ರಿಟಯರ್ಡ್ ಪೋಲೀಸ್ ಡೆಪ್ಯೂಟಿ ಸೂಪರಿಂಟಿಂಡೆಂಟರಾದ ರಾವ್ ಸಾಹೇಬ್ ನಡಿಕೇರಿಯಂಡ ಕಾಳಪ್ಪನವರೂ, ಮೇಗಳಾದ ಕೆ. ಅಮ್ಮುಕಾಕ, ಪಾಲಂದಿರ ಮೊಣ್ಣಪ್ಪ, ಚರಮೂರ್ತಿ ಮಹಂತಪ್ಪ, ಬಿದ್ದಂಡ ಪಿ. ಐಯ್ಯಪ್ಪ, ಬೊಪ್ಪಂಡ್ರ ಕುಟ್ಟಿಯ್ಯ, ಜಹಗೀರ್‌ದಾರ್ ಸೈಯ್ಯದ್ ಬದ್ರೂದೀನ್ ಸಾಹೇಬರೇ ಮುಂತಾದವರು ಇದರ ಪಾಲುದಾರರಾಗಿರುವರಲ್ಲದೆ, ಅನೇಕ ಮಹನೀಯರು ಪಾಲು ತೆಗೆದುಕೊಳ್ಳಲು ಮುಂದುಬರುತ್ತಿದ್ದಾರೆ.

ಹೆಚ್ಚಿನ ವಿಷಯಗಳನ್ನು ಕಂಪೆನಿಯ ಆಫೀಸಿನಲ್ಲಿ ತಿಳಿಯಬಹುದು.

ನೀವೂ ಸಹ ಇದರ ಪಾಲುದಾರರಾಗಿರಿ!

ಈ ದುರ್ಭಿಕ್ಷದ ಕಾಲದಲ್ಲಿ ಲಾಭ ಪಡೆಯಲು ಇದೊಂದೇ ದಾರಿ!!

ಬಿ. ಐ. ಉತ್ತೈಯ್ಯ,
ಪ್ರೆಸಿಡೆಂಟ್.

ಜಿ. ಎಚ್. ಹೌಸ್ ಪ್ರೆಸ್, ವೀರಾಜಪೇಟೆ.

ವೈದ್ಯಾಸನ ಮೆಡಿಕಲ್ ಕಾಲೇಜು ಎಂ. ಬಿ. ಬಿ. ಎಸ್. ಕೋರ್ಸಿನ 1ನೇ ವರ್ಷದ ಪರೀಕ್ಷೆಯಲ್ಲಿ ಮೆ. ಕೋದಂಡ ಪಿ. ನೋಮಯ್ಯನವರೂ, 2ನೇ ವರ್ಷದ ಪರೀಕ್ಷೆಯಲ್ಲಿ ಮೆ ಕೇತಿಯಂಡ ಗಣಪತ್ಕಿಯವರೂ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ. ಇವರಿಗೆ ನಮ್ಮ ಅಭಿನಂದನೆಗಳಿವೆ.

ಕಾರ್ಕಳದ ಶ್ರೀ ವೇಂಕಟರಮಣಸ್ವಾಮಿ ತ್ರಿಯೆಟ್ರಿಕಲ್ ಕಂಪೆನಿಯವರು ಈ ತಾ. 2ರಲ್ಲಿ 'ಮಿಸ್ ಸರಳ' ಎಂಬ ಭೋಧಪ್ರದವಾದ ಸಾಮಾಜಿಕ ನಾಟಕವನ್ನು ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ಮನೋಹರವಾಗಿ ಆಭಿನಯಿಸಿ ದೊರೆತ ಹಣದಲ್ಲಿ 50 ರೂಪಾಯಿಗಳನ್ನು ಕೊಡಗು ಹರಿಜನಸೇವಾ ಸೇವಾ ಸಂಘಕ್ಕೆ ಉಚಿತವಾಗಿ ಕೊಟ್ಟದ್ದು ಶ್ಲಾಘನೀಯವಾಗಿದೆ.

ಕೊಡಗಿನಿಂದ ವರ್ಗವಾಗಿ ಹೋದ ಮೆ. ಜಿ. ಯಸ್. ಬಾಳ್‌ಸುನ್ದರವರು ಕೊಡಗು ಕೌನ್ಸಿಲು ಮೆಂಬರುತನಕ್ಕೆ ಕೊಟ್ಟ ರಾಜೀನಾಮೆಯನ್ನು ಅಂಗೀಕರಿಸಿ, ಚೀಫ್ ಕಮಿಷನರವರು ಈಗಿನ ಕಮಿಷನರಾದ ಮೆ. ಐಯನ್ ಮೂರ್ಟಿನ್ ಫ್ರೇಜರವರನ್ನು ಕಳೆದ ಮಾರ್ಚಿ ತಾ 24 ರಿಂದ ಕೌನ್ಸಿಲಿನ ಮೆಂಬರಾಗಿಯೂ, ವೈಸ್ ಪ್ರೆಸಿಡೆಂಟರಾಗಿಯೂ ನೇಮಿಸಿರುವರು.

ರಜೆಯಲ್ಲಿ ಇಂಗ್ಲೆಂಡಿಗೆ ಹೋಗಿದ್ದ ಲೆಫ್ಟೆನೆಂಟ್ ಕರ್ನಲ್ ಸಿ ಟಿ ಸಿ. ಪಾಲ್ಟಿಡನ್‌ರವರು ಈ ತಾ. 16 ರಲ್ಲಿ ಬೆಂಗಳೂರಿಗೆ ಬರುವರು. ಹಂಗಾಮಿ ಚೀಫ್ ಕಮಿಷನರಾಗಿರುವ ಮೆ ಎಲ್. ಜಿ. ಎಲ್, ಈವನ್ಸ್‌ರವರು ಈ ತಾ. 13 ರಲ್ಲಿ ಬೆಂಗಳೂರಿಂದ ಬೆಂಬಾಯಿಗೆ ಹೋಗಿ ಅಲ್ಲಿ ಮೇ ಪಾಲ್ಟಿಡನ್‌ರವರಿಗೆ ಚೀಫ್ ಕಮಿಷನರ್ ಹುದ್ದೆಯ ಚಾರ್ಜನ್ನು ವಹಿಸಿಕೊಡುವರು. ಮೆ. ಈವನ್ಸ್‌ರವರು ಕೆಲಸದಿಂದ ನಿವೃತ್ತರಾಗುವ ಮುಂಚೆ ರಜೆಯಲ್ಲಿ ಹೋಗುವರು.

ಅವೆಲ್ಲವೂ ಒಂದೇ ಸಮ ತಾಗುತ್ತವೆ.



ಆವರೆ ಮತ್ತೊಂದರಲ್ಲಿ ಅರ್ಧ ನೀರು.

ಕಡಿಮೆ ಬೆಲೆಯ ಸಾಧಾರಣ ಸಾಬೂನುಗಳಲ್ಲಿ ಅರ್ಧಾಂಶವು ಬರೀ ನೀರಾಗಿದೆ. ಆದ್ದರಿಂದ ತಕ್ಕಡಿಯಲ್ಲಿ ಅವುಗಳಲ್ಲಿ ವ್ಯತ್ಯಾಸಗಳು ಕಾಣಬರುವುದಿಲ್ಲ. ಆದರೆ ಅವುಗಳಲ್ಲಿ ನೋವು ಕಡಿಮೆ. ಅವು ಫಕ್ಕನೆ ಕರಗುವವು. ಆದರೆ 501 ಮಾರ್ಕಿನ ಸಾಬೂನಿನಲ್ಲಿ ಗಟ್ಟಿ ಸಾಬೂನು ಇರುವುದರಿಂದ ನಿಮಗೆ ತಕ್ಕ ಪ್ರತಿಫಲಗಳು ದೊರೆಯುವವು. ನಿಮ್ಮ ವಸ್ತ್ರಗಳನ್ನು ಶೀಘ್ರದಲ್ಲೇ ಶುಭ್ರಗೊಳಿಸುವವು.

ನೆಚ್ಚ ಕಡಿಮೆ. ವಸ್ತ್ರ ಬಾಳಿಕೆ. ಶ್ರಮಅತೀ ಕಡಿಮೆ!

ಟಾಟ್‌ಕೋ ಮಾರಾಟದ ಮಳಿಗೆ, ಟಿ. ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ಸಿಂಡು

501 Soap

ತಯಾರಿಸುವವರು—ತಾತಾ ಆಯಿಲ್ ಮಿಲ್ಸ್, ಕಂಪೆನಿ ಲಿಮಿಟೆಡ್, ಬಿಂಬಾಯಿ ಮತ್ತು ತಾತಾನಗರ.

52—49. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮಡಿಕೇರಿ.

ಸಮರ್ಪಕ ಆಡಳಿತದಿಂದ, ಕಡಿಮೆಯೊದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ
ಭಾರತ ವಿವೂರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಜ್ಜ್ವಲಗೌರವವನ್ನೂ ಸಂಪಾದಿಸಿರುವ

ಮುಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯ, ನಿಮ್ಮ ಬಲುಮೆಯ ಈ ಸಂಸ್ಥೆಯಲ್ಲಿ
ತಪ್ಪದೆ ವಿಮೆಯನ್ನಿಳಿಸಿ.

ಮೊದಲನೇ 5 ವರ್ಷಗಳ ಮೌಲ್ಯಪೀತನದ ಫಲಿತಾಂಶವಾಗಿ ಪ್ರತಿಯೊಂದು
1000 ರೂಪಾಯಿಗಳ ವಿಮೂಪತ್ರದ ಮೇಲೆ,—

ವರ್ಷ 1ಕ್ಕೆ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯಪೀತನದಲ್ಲಿ ಇಷ್ಟು ಬೋನಸನ್ನು ಹಂಚಿದ ಹಿಂದೀ ವಿಮೂಕಂಪೆನಿಗಳು
ಅತಿ ವಿರಳವೆಂಬುದನ್ನು ಮರೆಯದಿರಿ.)

ನಮ್ಮ ಪ್ರತಿನಿಧಿಯಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ನ್ಯಾಪಾರರೂ, ಯೋಗ್ಯರೂ ಆದ

ಏಜಂಟರು ಬೇಕು.

ಮೂಹಿತಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮುಂಗಳೂರಿನ ಕಾರ್ಯಾಲಯಕ್ಕೆ ಬರೆಯಿರಿ.

ಮಡಿಕೇರಿ ಏಜಂಟರು—
ಬಿ. ಜಿ. ಬೆಳ್ಳಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ. (12—11)

ಸುಂಟಿಕೊಪ್ಪ ಏಜೆಂಟರು—
ಏ. ಎಸ್. ಮೂಚಯ್ಯನವರು,
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

ಪ್ರಕಟಣೆ.

ಮಡಿಕೇರಿ ಪೋಸ್ಟಾಫೀಸಿನಿಂದ.

ಮಡಿಕೇರಿಯಿಂದ ಹೊರಗೆ ಕಳುಹಿಸುವ ಟಪಾಲಿನ ಸಮುಯವು ಈ ವರೆಗೆ ಬೆಳಿಗ್ಗೆ 7½ ಗಂಟೆಗಿದ್ದದ್ದು ಈ ತಿಂಗಳಿ ಪಾತ್ರಂಭದಿಂದ (1—5—36 ರಿಂದ) 7 ಗಂಟೆಗೆ ಬದಲಾಯಿಸಿರುವುದರಿಂದ ಹೊರಗಿರುವ ಮೊಫುಸಿಲ್ ಪೆಟ್ಟಿಗೆಗಳಿಂದ ಟಪಾಲುಗಳನ್ನು ದಿನಕ್ಕೆ ಒಂದೇ ಸಾರಿ ತೆಗೆಯಲಾಗುವುದು. ಅದೂ ಸಾಯಂಕಾಲದಲ್ಲಿ. ಆಫೀಸಿನಲ್ಲಿರುವ ಪೆಟ್ಟಿಗೆಯನ್ನು ಮಾತ್ರ ಬೆಳಿಗ್ಗೆ 6½ ಗಂಟೆಗೆ ಒನ್ಮೆ ತೆರೆಯಲಾಗುವುದು.

ಹಿಂದೂ ವೇಲೆ.

ಬೊಂಬಾಯಿಯ ಸಗಟುಪ್ಪು ಜಾಯಿ ವ್ಯೋಪಾರಿ ಸಂಸ್ಥೆಯನ್ನು ಸ್ಥಾಪಿಸುವ ಕಾರ್ಯಕ್ರಮಗಳಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ಬಹುಭಾಗ ಜಯಶೀಲರಾಗಿದ್ದಾರೆ

ಶ್ರೀ ಘನಶ್ಯಾಮದಾಸಬಿರ್ಲಾರವರು ಮುಹಾತ್ಮಾ ಗಾಂಧಿಜಿಯವರಿಗೂ ಲಾರ್ಡ್ ಲಿನ್‌ಲಿತ್‌ಗೋ ರವರಿಗೂ ಭೇಟಿಯನ್ನೇರ್ಪಡಿಸಲು ಪ್ರಯತ್ನಪಡುತ್ತಿರುವರಂತೆ

ನೆಲಹ್ಲೂರಿನಲ್ಲಿ ಕೋತಿಗಳ ಕಾಟ ಹೆಚ್ಚಾಗಿರುವುದರಿಂದ ಅವನ್ನು ದೇಶದಿಂದ ಓಡಿಸಲು, ಖರ್ಚಿಗೆ ಆಲ್ಲಿ ಮುನ್ಸಿಪಾಲಿಟಿಯವರು 500 ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ

ಅಖಿಲ ಕೇರಳ ದೇವಾಲಯ ಪ್ರವೇಶ ಸಮ್ಮೇಳನವು ತಿರುವಂಕೂರಿನಲ್ಲಿ ಮೇ ತಿಂಗಳು 9 ನೇ ತಾ. 10ನೇ ತಾರೀಖುಗಳಲ್ಲಿ ಶ್ರೀಮತಿ ಬ್ರಿಜಬಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಶ್ರೀ ಸುಭಾಸ್ ಬೋಸರು ಬಿಡುಗಡೆಯಾದ ದಿನಾಚರಣೆಯ (10—5—36) ರಾಲದಲ್ಲಿ ಸುಮಾರು ಸೆರೆಮನೆಗಳು ಅಲಾಹಾಬಾದಿನಲ್ಲಿ ಭಾಷಣ ಮಾಡುತ್ತಾರೆ. ಅವರು ಅಲ್ಲಿ ಭಾಷಣ ಮಾಡಿ ಅನೇಕ ವರ್ಷಗಳಾದುವು.

ಹಿಂದಿನಸ್ಥಾನದ ಗವರ್ನರ್ ಜನರಲ್‌ರಾಷ ಲಾರ್ಡ್ ಲಿನ್‌ಲಿತ್‌ಗೋ ಯವರು ಪತ್ನೀ ಸಮೇತರಾಗಿ ಸಂಯುಕ್ತ ಸ್ವಾತಂತ್ರ್ಯದಲ್ಲಿರುವ ಪಿಜೋಲ, ಮಜ್ಯ ಮುಖ್ಯ ಬಿಜಿಕ್ಷು ಈ ಗಾಂಧ್ಯವಾಗಳಿಗೆ ಹೋಗಿ ಅಲ್ಲಿನ ಗೃಹಮಂಗಳಿಷಿಡಸೆ ಸ್ವಯಸಾಯದ ವಿಷಯವಾಗಿ ಮೂತನಾಡಿ ಅವರ ಕಷ್ಟ ಸುಖಗಳನ್ನು ತಿಳಿದುಕೊಂಡರೆಂದು ಹೇಳಲಾಗಿದೆ

ಇಂಡಿಯಾ ಗವರ್ನಮೆಂಟಿನಲ್ಲಿ ನಾನಾ ಅಧಿಕಾರಗಳನ್ನು ವಹಿಸಿ ನಿವೃತ್ತರಾಗಿದ್ದ ಸರ್ ಜೋಸೆಫ್ ಭೋರ್ ರವರು ಭಾವಾಳಿ ಸಂಸ್ಥಾನದ ನವಾಬರು ಆರ್ಥಿಕ, ವಾಣಿಜ್ಯ ಮತ್ತು ಕೈಗಾರಿಕೆ ಇವುಗಳ ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಸರ್ಕಾರಕ್ಕೆ ಸಲಹೆಕೊಡಲು ಅಡ್ವೈಸರಾಗಿ ನೇಮಿಸಿಕೊಂಡಿರುತ್ತಾರೆ.

ಪ. ಮದನಮೋಹನ ವಾಳವ್ಯರವರು ಡಾಲ್ಟನ್‌ಗಂಜ್ ಎಂಬಲ್ಲಿ ಕಳೆದ ವಾರ ಹಿಂದೂ ಜನರಾಗವರುಗೆಲ್ಲರೂ ಹೋಗಿ ಪೂಜೆಪುನಸ್ಕಾರಗಳನ್ನು ಮಾಡಿಸಲು ಅನುಕೂಲವಾಗುವಂತೆ ಒಂದು ದೇವಾಲಯವನ್ನು ಸ್ವಾಮ್ಯಭೋಕ್ತೃತ್ವವನ್ನು ನಿರ್ವಹಿಸಿದರು. ಹರಿಜನರೂ ನಿರಾತಂಕವಾಗಿ ಆ ದೇವಸ್ಥಾನದೊಳಕ್ಕೆ ಹೋಗಿ ಅರ್ಚನೆ ಮಾಡಿಸಬಹುದಾಗಿದೆ.

ರಾಜಕೀಯ ಸಂಬಂಧವಾದ ಭಾಷಣಗಳನ್ನು ಮಾಡಕೂಡದೆಂದು ಅಲ್ಲಿನ ಡಿಸ್ಟ್ರಿಕ್ಟ್ ಮಜಿಸ್ಟ್ರೇಟರು ಹೊಕುಮು ಜಾರಿನೂಡಿದ್ದಾಗ್ಯೂ ಅದನ್ನು ಉಲ್ಲಂಘಿಸಿ ಮಿ. ಸುಭಾಷ್‌ಚಂದ್ರ ಬೋಸ್‌ರವರ ದಸ್ತಗಿರಿಯ ವಿಷಯವಾಗಿ ಉಪನ್ಯಾಸನೂಡಿದರೆಂದು ಪೂನಾ ಪಟ್ಟಣದ ಪ್ಲೀಡರ್ ಮಿ. ಕೆ ಎಸ್. ಪದಕಿ ಎಂಬವರನ್ನು ಪೊಲೀಸಿನವರು ದಸ್ತಗಿರಿ ಮಾಡಿರುತ್ತಾರೆ.

ಭದ್ರಾವತಿಯಲ್ಲಿ ಕಾರ್ಖಾನೆ ಸ್ಥಾಪಿಸಲು ಅದರ ಭಂಡವಾಳವನ್ನು ಜಾಯಿಂಟ್ ಸ್ಟಾಕ್ ಕಂಪೆನಿಯೂಲಕ ಒದಗಿಸಲು ಸರ್ಕಾರದವರು ಆಡ್ವೈಸ್ ಮಾಡಿದ್ದಾರೆ. ಮೈಸೂರು ಸರ್ಕಾರದವರು ಭಂಡವಾಳದ 10ನೇ 1 ಭಾಗ ಹಾಕುವೆಂದೂ, ತಯೂರಾದ ಕಾರಣದವು ಚೆನ್ನಾಗಿದ್ದಲ್ಲಿ ತಮ್ಮ ಉದ್ದೇಶಕ್ಕೆ ಬೇಕಾದಷ್ಟನ್ನು ತೆಗೆದುಕೊಳ್ಳುವುದಾಗಿಯೂ, ಹೇಳಿಕಳುಹಿಸಿ ಮಾಡಿದ್ದಾರೆ

ಮಹಾತ್ಮಾ ಗಾಂಧಿಯವರು ತಾ. 10 ನೇ ಭಾನುವಾರ ಬೆಳಿಗ್ಗೆ ಮದರಾಸಿನ ಮೂಕಲ ಬೆಂಗಳೂರಿಗೆ ಬಂದು ಒಡನೆಯೇ ಮೋಟಾರಿನಲ್ಲಿ ನಾಡೀ ಬೆಟ್ಟಕ್ಕೆ ಹೋಗುತ್ತಾರೆ. ಅವರೊಡನೆ ಶ್ರೀಮತಿ ಕಸ್ತೂರಿಬಾಯಿ ಗಾಂಧಿ, ಸರ್ದಾರ್ ವಲ್ಲಭಾಯಿ ಪಟೇಲ್, ಮಿಸ್ ಮಣಿಬೆನ್ ಪಟೇಲ, ಮೆ. ಗಳಾದ ಮಹದೇವ ದೇಸಾಯ್ ಮತ್ತು ಜೆ. ಯಂ. ಕುಮಾರಪ್ಪನವರೂ ಬರುವರು. ಮಿ. ಗಾಂಧಿಯವರು ರಾಜಕೀಯ ಸಂಬಂಧವಾದ ಯಾವ ಚರ್ಚೆಗಳಲ್ಲಾ ಭಾಗ ವಹಿಸುವುದಿಲ್ಲವೆಂದು ಹೇಳಿರುತ್ತಾರೆ. ಮೈಸೂರು ಸಂಸ್ಥಾನದ ಹರಿಜನ ಸೇವಕ ಸಂಘದವರು ಬೆಂಗಳೂರಿನಲ್ಲಿ ಮೇ ತಾ. 20 ರಿಂದ 26 ರ ವರೆಗೆ ನಡೆಯುವ ಹರಿಜನ ವಾರದ ಆಚರಣೋತ್ಸವವನ್ನು ಮಿ. ಗಾಂಧಿಯವರ ಹಸ್ತ ಸಮಾರಂಭಿಸಬೇಕೆಂದು ಪ್ರಯತ್ನಪಡುತ್ತಿರುವರೆಂದು ಹೇಳಲಾಗಿದೆ.

ಇಟಲಿ ಅಬಿಸೀನಿಯ ಯುದ್ಧ.

ಅಬಿಸೀನಿಯದ ಚಕ್ರವರ್ತಿಗಳು ರಾಜ್ಯವನ್ನು ಬಿಟ್ಟರು.

ಅರಾಜಕತೆಗೆ ಪರಿಹಾರ ಸಮೀಪ ಪ್ರಯಾಣ ಮಾಡಿದ್ದರು.

ಇಟಲಿಯ ಸದು ಅಡ್ಡಿಸ್ ಅಬಾಬವನ್ನು ಆಕ್ರಮಿಸಿದರು.

೨೯,೧೦ ಇಟಲಿ ಸೈನ್ಯವು ಅಬಿಸೀನಿಯಾ ರಾಜಧಾನಿಯನ್ನು ಸೇರಿದೆ.

ಏಪ್ರಿಲ್ ತಾ. 30.

ಚಕ್ರವರ್ತಿಗಳ ಕೊನೆಯ ಪ್ರಯತ್ನ.

ಚಕ್ರವರ್ತಿಗಳು ತಮ್ಮ ರಾಜಧಾನಿಯನ್ನು ಉಳಿಸಲು ತಮ್ಮ ಕೊನೆಯ ಪ್ರಯತ್ನಗಳನ್ನು ಮಾಡುತ್ತಿದ್ದಾರೆಂದು. ಸೈನ್ಯಗಳನ್ನು ಅಲ್ಲಲ್ಲಿ ನಿಲ್ಲಿಸಿರುವರು. ರಾಜಧಾನಿಯನ್ನು ಯಾವ ಪ್ರಕಾರದಿಂದಾದರೂ ಉಳಿಸಬೇಕೆಂದು ಮಂತ್ರಿ ಪರಿಷತ್ತಿನವರೊಡನೆ ವಿಚಾರ ಮಾಡುತ್ತಿದ್ದಾರೆಂದು.

ರಾಜಧಾನಿಯ ಮೇಲೆ ಬಾಂಬ್.

ಈ ದಿನ ಇಟಲಿಯ ವಿಮಾನ ಬಲವು ರಾಜಧಾನಿಯ ಮೇಲೆ ಹಾರಾಡುತ್ತಲಿತ್ತು. ಒಮ್ಮೆಲ್ಲಾ ಭಯಂಕರವಾದ ಬಾಂಬುಗಳನ್ನು ಎಸೆದು ಹಿಂದಕ್ಕೆ ಹೊರಟುಹೋದವು.

ಮಳೆಯೇ ಅಬಿಸೀನಿಯಾದ ರಕ್ಷೆ.

ಕಳೆದ ದಿವಸ ಅಡ್ಡಿಸ್ ಅಬಾಬದಲ್ಲಿ ಭಾರೀ ಮಳೆಯು ಹೊಡೆಯಿತು. ಈಗ ಪ್ರವರ್ತಿಸುವ ವರ್ತಮಾನದಿಂದ ಇಟಲಿಯವರು ಮೇ ತಿಂಗಳಲ್ಲಿ ರಾಜಧಾನಿಯನ್ನು ಮುತ್ತಿಗೆಯಿಂದ ಕೈಬಿಡುವುದು ಎಂದು ತಿಳಿದಿದ್ದಾರೆ. ಆದರೆ ಎಡಿಬಹಿ ಮಳೆಯು ಹೊಡೆದ್ದಾದರೆ ಅಬಿಸೀನಿಯರಿಗೆ ತಮ್ಮ ರಾಜಧಾನಿಯನ್ನು ರಕ್ಷಿಸಲು ಬಹು ಸಹಾಯವಾಗುವುದು.

ವಿಷಗಾಳಿಯ ಭೀತಿ.

ವಿಷಗಾಳಿಯ ಪ್ರಯೋಗದಿಂದ ಹೇಗೆ ಅಬಿಸೀನಿಯರಿಗೆ ಸೋಲಾಗುತ್ತದೆಂಬುದನ್ನು ಒಬ್ಬ ಸೈನಿಕನಿಂದ ತಿಳಿಸಲಾಗಿದೆ. ಈತನು ಚಕ್ರವರ್ತಿಗಳ ಸೈನ್ಯದಲ್ಲೇ ಇದ್ದನು. ತಾ. 28 ರಿಂದ 30 ನೇ ತಾರೀಕಿಗೆ ಅಂಜಿಲಿಗಿ ಎಂಬಲ್ಲಿ ಚಕ್ರವರ್ತಿಗಳ ಸೈನ್ಯಕ್ಕೂ, ಇಟಲಿಯವರ ಸೈನ್ಯಕ್ಕೂ ಭಯಂಕರ ಕದನವಾಯಿತು. 3 ದಿವಸಗಳ ಯುದ್ಧದಲ್ಲಿ ಅಬಿಸೀನಿಯರಿಗೆ ಜಯವಾಯಿತ್ತು. ಆದರೆ ಮೂರನೆ ದಿನ ಅನೇಕ ವಿಷಗಾಳಿಯ ಬಾಂಬುಗಳನ್ನು ಎಸೆದರು. ತಕ್ಷಣವೇ ಅಬಿಸೀನಿಯ ಸೈನ್ಯದಲ್ಲಿ 'ಗ್ಯಾಸ್' ಮಾಸ್ಕ್ ಇದ್ದ ಕೆಲವು ಸೈನಿಕರಲ್ಲದೆ ಬಾಕಿ ಸಕಲರೂ ತಕ್ಷಣ ಮೃತ ಹೊಂದಿದರಂತೆ.

ಮೇ ತಾ. 1

ರಾಜಧಾನಿಯು ಕಡೆ ಧಾವಿಸುತ್ತಿರುವರು.

ಇಟಲಿಯ ಸೈನಿಕರು ರಾಜಧಾನಿಯ ಕಡೆಗೆ ಧಾವಿಸುತ್ತಿರುವರು. ಇನ್ನೂ ರಾಜಧಾನಿಯು ಇಟಲಿಯವರ ಕೈವಶವಾಗಿಲ್ಲ.

ಚಕ್ರವರ್ತಿಗಳ ನಿರ್ಧಾರ.

ಚಕ್ರವರ್ತಿಗಳು ತಮ್ಮ ಇಬ್ಬರ ಸೇನೆಗಳನ್ನೆಲ್ಲಾ ಸಂಗ್ರಹಿಸಿ ಕಡೆಯ ಪಕ್ಷ ಕಾದಾಡಿ ಮೆಮೆಂದು ನಿರ್ಧರಿಸಿರುವರಂತೆ ರಾಜಧಾನಿಯಲ್ಲಿ ಇವರು ಇಂದು ಬಂತ್ರಿ ಮಂಡಲಿಯವರೊಡನೆ ಮೀರ್ಫ ಆಲೋಚನೆ ನಡೆಸುತ್ತಿರುವರು.

ರಾಜ ಕುಟುಂಬವು ಜೆರೂಸಲೇಮಿಗೆ.

ಚಕ್ರವರ್ತಿನಿಯವರು ಮತ್ತು ರಾಜ ಕುಟುಂಬದವರು ಕ್ಷೇಮ ವಾಸ್ಯ ಸ್ಥಳವಾದ ಜೆರೂಸಲೇಮಿಗೆ ಹೋಗುವೆಂದೂ ಚಕ್ರವರ್ತಿಗಳೂ ಮತ್ತು ಯುವ ರಾಜರೂ ಯುದ್ಧ ರಂಗಕ್ಕೆ ತೆರಳುವರೆಂದೂ ತಿಳಿಯಬಂದಿದೆ.

ಇಟಲಿಯ ವಿಮಾನ ಕೆಡಹಲ್ಪಟ್ಟಿತು.

ರಾಜಧಾನಿಯಿಂದ 20 ಮೈಲು ದೂರದಲ್ಲಿ ಒಂದು ಇಟಲಿ ವಿಮಾನವನ್ನು ಹೊಡೆದು ಕೆಡಹಲ್ಪಟ್ಟಿತು.

ಮೇ ತಾ. 2

ಚಕ್ರವರ್ತಿಗಳು ರಾಜಧಾನಿಯಿಂದ ತೊಲಗಿದರು.

ಚಕ್ರವರ್ತಿಗಳು ತಮ್ಮ ರಾಣಿ ಮತ್ತು ಯುವರಾಜ ಸಮೇತರಾಗಿ ರಾಜಧಾನಿಯಿಂದ ಫ್ರೆಂಚ್ ಬಂದರಾದ ಡ್ಜಿಬೌಟಿಗೆ ರೈಲಿನಲ್ಲಿ ಹೊರಟರು.

ಅರಮನೆಯನ್ನೇ ತೆರೆದಿಟ್ಟರು.

ಚಕ್ರವರ್ತಿಗಳು ಹೊರಡುವಾಗ್ಗೆ ತಮ್ಮ ಅರಮನೆಯನ್ನು ತೆರೆದು ಯಾರು ಬೇಕಾದರೂ ತಮಗೆ ಬೇಕಾದ್ದನ್ನು ತೆಗೆದುಕೊಳ್ಳಬಹುದೆಂದು ತೆರೆದಿಟ್ಟರು. ಕೂಡಲೇ ಸಹಸ್ರಗಟ್ಟಿ ಜನರು ಅರಮನೆಗೆ ನುಗ್ಗಿ ತಮಗೆ ಬೇಕಾದ್ದೆಲ್ಲವುಗಳನ್ನು ಸಾಗಿಸಿದರು ಅಲ್ಲದ್ದ ಕೋವಿ ತೋಟಗಳನ್ನೂ ತೆಗೆದರು.

ಸಕಾರದ ಮುಖ್ಯ ಕಛೇರಿ.

ರಾಜಧಾನಿಯಿಂದ ಮುಖ್ಯ ಸರಕಾರಿ ಕಛೇರಿಗಳನ್ನು 60 ಮೈಲು ದೂರದಲ್ಲಿರುವ ಗೋರ್ ಎಂಬಲ್ಲಿಗೆ ಒಯ್ದಿದ್ದರು. ಚಕ್ರವರ್ತಿಗಳು ರಾಜಧಾನಿಯನ್ನು ಬಿಟ್ಟರೂ ಕೂಡ ಅವರು ಅಬಿಸೀನಿಯಾದ ಚಕ್ರವರ್ತಿಗಳಾಗಿಯೇ ಇರುವರು.

ಉಳಿದ ಅರಸರಾಜ್ಯಾಂಗತ ಸಾಮಗ್ರಿಗಳನ್ನು ಪರ್ವತಗಳಿಗೊಯ್ದಿರುವರು.

ಡ್ಜಿಬೌಟಿಗೆ ತಲಪಿದರು.

ರಾಜಧಾನಿಯಿಂದ ಸ್ವೆತಸ್ ರೈಲಿನಲ್ಲಿ ರಾತ್ರಿ ಎಂಟು ಗಂಟೆಗೆ ಚಕ್ರವರ್ತಿಗಳು ಹೊರಟರು. ಅವರು ತಾ. 3ರಲ್ಲಿ ಡ್ಜಿಬೌಟಿಗೆ ತಲಪಿದರು. ದಾರಿಯಲ್ಲಿ ಒಂದು ಇಟಲಿಯ ವಿಮಾನವು ಬಹು ದೂರ ಅವರನ್ನು ಹಿಂಬಾಲಿಸಿತು. ಅಲ್ಲಲ್ಲಿ ಇಥಿಯೋಪಿಯನರು ತಮ್ಮ ಚಕ್ರವರ್ತಿಗಳನ್ನು ನೋಡಲು ತಂಡ ತಂಡವಾಗಿ ಬಂದು ನೆರೆದಿದ್ದರು. ಡಿರೆಡಾವದಲ್ಲಿ ಒಗಾಡನ್ ಪ್ರಾಂತ್ಯದ ನಾಲ್ಕು ಕೊಡೆಗಳ ಚಕ್ರವರ್ತಿಗಳು ಸಂಭಾಷಣೆ ನಡೆಸಿದರು. ಹಾಗೂ ಪ್ರವಾಸವು ವ್ಯಸನವಿಯವಾಗಿತ್ತು.

ಚಕ್ರವರ್ತಿಗಳನ್ನು ಹಿಂಬಾಲಿಸಿದ ರಾಜ ಕುಟುಂಬದವರು.

ಚಕ್ರವರ್ತಿಗಳೊಡನೆ ಚಕ್ರವರ್ತಿನಿಯವರು, ಯುವರಾಜರು, ಯುವರಾಣಿಯವರು, ರಾಜಕುಮಾರ ಮೊಕೊನೆನ್, ಇಬ್ಬರು ರಾಜ ಕುಮಾರಿಯರುಗಳು, ರಾಸ್ ಕಾಸ್ಸಾ ಮತ್ತು ಅವರ ಪತ್ನಿ, ರಾಸ್ ಗೆಟಾಚು, ಬೆಶಟಿನಗೆಟಾ ಹೆರಾಯಿ, ಡೆಜಾಜ್ಮಾಚ್ ವೊಲ್ಡ್ ಮೇರಿಯಮ್, ಡೆಜ್ಜಾಜ್ ಗ್ಯಾವೊ, ಡೆಜ್ಜಾಜ್ ಅನಾಫಿಸೆ, ಸಫಿಟೆಗಳ್ ಹೈಲಿ, ರಾಸ್ ಇಮ್ಮಿರು ಎನ್ನಿ, ಡೆಜ್ಜಾಜ್ ಬಿರ್ರೂ ಮತ್ತು ಇತರ ಕೆಲವು ಸಂಬಂಧಿಕರು ಹೀಗೆ ಒಟ್ಟು 40 ಮಂದಿಗೆ ಮೇಲ್ಪಟ್ಟ ಚಕ್ರವರ್ತಿಗಳನ್ನು ಹಿಂಬಾಲಿಸಿದರು.

ಮೇ ತಾ. 3.

ಇಟಲಿಯಲ್ಲಿ ಅವರಿಗೆ ತಕ್ಕ ಸಂತೋಷ.

ಚಕ್ರವರ್ತಿಗಳು ರಾಜ್ಯವನ್ನು ಬಿಟ್ಟ ವರ್ತಮಾನವು ತಲಪುತ್ತಲೇ ರೋಮ್ ನಗರದಲ್ಲಿ ಸಂತೋಷಕ್ಕೆ ಪಾರವೇ ಇಲ್ಲ. ಮಿಲಿಟರಿ ವಿಷಯವಾಗಿ ಚಕ್ರವರ್ತಿಗಳ ತೆಗಳುವಿಕೆಯು ಇಷ್ಟು ಮಹತ್ವದ್ದಿಲ್ಲವೆಂದು ಕೆಲವರು ಹೇಳುತ್ತಿರುವರು.

ಅಮೆರಿಕೆಯ ಸಹಾಯ.

ಅಮೆರಿಕೆಯಿಂದ ಸಹಾಯಕ್ಕೆ ಬರಬೇಕಾಗಿದೆ. ಇಟಲಿಯಲ್ಲಿ ರಾಜಧಾನಿಯಲ್ಲಿ ಒಹಳ ಅವ್ಯವಸ್ಥೆಗಳೂ, ದುಂದೇಡೆ ಕೊಲೆ ಮುಂತಾದವುಗಳಿಗೆ ಮಿತಿಮೀರಿದೆ. ಪಾರಿಷ್ಯ ನಿವಾಸಿಗಳು ತಮ್ಮ ತಮ್ಮ ಸರ್ಕಾರಿಗಳ ಕಛೇರಿಯಲ್ಲಿ ಆಶ್ರಯವಿಡೆದಿರುವರು. ಕಳ್ಳಕಾಕರ ಹಾವಳಿಯು ಬಹಳ ಅತಿಶಯವಾಗಿದೆ.

ಮೇ ತಾ. 4.

ಚಕ್ರವರ್ತಿಗಳು ನಿರಾಸ್ರೈನಿಗೆ ಹೋದರು.

ಡ್ಜಿಬವ್ತಿಯಲ್ಲಿ ಒಂದು ದಿನ ವಾಸ್ತವ್ಯ ಫ್ರೆಂಚರ ಅಧಿಕಾರಿಯವರಿದ್ದ ಅಬಿಸೀನಿಯ ಚಕ್ರವರ್ತಿಗಳು ಬಾಯು ಬ್ರಿಟಿಷ್ ನೌಕೆಯಲ್ಲಿ ಪ ಲಸ್ತೈನಿಗೆ ಹೊರಟರು.

ರಾಜಧಾನಿಯಲ್ಲಿ ಸಂಭ್ರಮವಾಗಿದೆ

ರಾಜಧಾನಿಯಲ್ಲಿನ ಕೊಳ್ಳೆ, ಸುಲಿಗೆ ಮತ್ತು ಕೊಲೆಗಳು ತಗ್ಗಿ ಕೊಂಚ ಶಾಂತವಾಗಿದೆ. ಇಟಲಿಯವರು ನಾಳೆ ರಾಜಧಾನಿಯನ್ನು ಪ್ರವೇಶಿಸುವರು.

ಮೇ ೫ ತಾ. 5

ಇಟಲಿಯವರಿಂದ ರಾಜಧಾನಿಯಲ್ಲಿ.

ಈಗ ಇಟಲಿ ಸೈನ್ಯದ ಒಬ್ಬ ಅಧಿಕಾರಿಯಾಗಿರುವ ಸೆನಾಪತಿ ಬೊಟಾಯಾನಿಯವರು (ತಮ್ಮ ರೋಮನ ಗೃಹದಲ್ಲಿ) ಅಡಿಸ್ ಅಬಾಬಕ್ಕೆ ಒಂದು ಕಾಲಿಟ್ಟರು. ಅನಂತರ ಕೊಂಚ ಸಮಯದ ನಂತರ ಮೂಸಲಿನಿ ಜೊಡೆಚಿಗ್ಲಿಯೋಯವರು ಶ್ವೇತ ಅಶ್ವಾರೂಢರಾಗಿ ರಾಜಧಾನಿಯನ್ನು ಸೇರಿದರು. 25,000 ಇಟಲಿ ಸೈನ್ಯದವರು ರಾಜಧಾನಿಯನ್ನು ಸೇರಿದರು. ಯಾವ ವಿಧದ ಅತಂಕಗಳೆಲ್ಲವೂ ರಾಜಧಾನಿಯನ್ನು ಆಕ್ರಮಿಸಿದರು.

ಪೊನ್ನಂಪೇಟೆ—ಶ್ರೀಮಂಗಲನಾಡುಗಳ ಜಮ್ಮ ಓಟರುಗಳಲ್ಲಿ ಪಿ. ಜಿ. ಮುದ್ದಪ್ಪಯ್ಯನ ವಿಜ್ಞಾಪನೆ.

ಈ ವೇಳೆಲೇ ನಾನು ತಮ್ಮನ್ನು ಕೇಳಿಕೊಂಡ ಮೇರೆ ಇದೇ ಮೇ ತಿಂಗಳಿಗೆ 15 ನೇ ಶುಕ್ರವಾರ ದಿನ ತಾವುಗಳೆಲ್ಲರೂ ತಮ್ಮ ತಮ್ಮ ಪೋಲಿಂಗ್ ಸ್ಟೇಶನಿಗೆ ದಯಮಾಡಿಸಿ ನನ್ನ ಹೆಸರಿಗೆ ಕೂಟ್ಟಿರುವ ಹಲಗುರ್ತಿಗೆ ಒಂದು ಓಟನ್ನು ಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಪಿ. ಜಿ. ಮುದ್ದಪ್ಪಯ್ಯ.

2. ಪಿ. ಜಿ ಮುದ್ದಪ್ಪಯ್ಯ. X

ವರ್ತಮಾನ ಸಂಗ್ರಹ.

ಕೊಡಗು.

ಕೊಡಗು ಟೆರಿಟೋರಿಯಲ್ ಪಟಲಾವಿನ ಆಟೋಟಗಳು ಈ ತಾ. 7ರಲ್ಲಿ ನಡೆಯವು.

ಇಂಡಿಯಾದ ಚಕ್ರವರ್ತಿಗಳ ಜುಬ್ಲಿಮಹೋತ್ಸವಕ್ಕಾಗಿ ಬರುವ ಜೂನ್ ತಾ 23 ಸರಕಾರಿ ರಜೆ ದಿನವಾಗಿರುವುದು.

ಜನರಲ್ ಕಮಾಂಡಿಂಗ್ ಆಫೀಸರು ಈ ತಾ. 4ರಲ್ಲಿ ಕೊಡಗು ಟೆರಿಟೋರಿಯಲ್ ಪಟಲಾವಿನ ಇನ್ಸ್‌ಪೆಕ್ಷನ್ ಮಾಡಿದರು.

ಕಳೆದ ಮೂರು ತಿಂಗಳಲ್ಲಿ ಕೊಡಗು ಸಾಮ್ರಾಜ್ಯದಲ್ಲಿ 339 ಜನನಗಳೂ, 335 ಮರಣಗಳೂ ಸಂಭವಿಸಿದವೆಂದು ಪ್ರಕಟವಾಗಿದೆ.

ಕೊಡಗು ರಿಜಿಸ್ಟ್ರೇಷನ್ ಟೆನ್ನಿಸ್ ಸ್ಪರ್ಧೆಯು ಒರುನ ಆಗೊಸ್ಟ್ ತಾ. 17 ರಿಂದ 19 ನೇ ವರೆಗೆ ಮಡಿಕೇರಿಯಲ್ಲಿ ನಡೆಯುವುದು.

ಕಳೆದ ಫೆಬ್ರವರಿ ತಿಂಗಳ ಅಂತ್ಯದಲ್ಲಿ ಕೊಡಗು ಸರಕಾರದ ಖರ್ಚು ಉತ್ಪತ್ತಿಗಿಂತ 2 ಲಕ್ಷ 41 ಸಾವಿರ ರೂಪಾಯಿ ಹೆಚ್ಚಾಗಿತ್ತು.

ಪತ್ಯಗಟ್ಟು ನಾಡಿನ ಪೊನ್ನಪ್ಪ ಸಂತೆಯಲ್ಲಿ ಈ ತಾ. 1 ಮತ್ತು 2ರಲ್ಲಿ ದನಗಳ ತಕರಾರಿ, ಕೈಗಾರಿಕೆ ವಸ್ತುಗಳ ಪ್ರದರ್ಶನ ನಡೆಯಿತು.

ಮೇ. ಪಟ್ಟವಾಡ ಚಂಗಪ್ಪನವರು ಮೆಟಲ್ಲರ್ಜಿಯ ಆನೆಕಟ್ಟಿನ ಹಂಗಾಮಿ ಎಸ್ಸಿಕ್ಯುಟಿವ್ ಇಂಜಿನೀಯರಾಗಿ ನೇಮಿಸಲ್ಪಟ್ಟಿರುವರೆಂದು ಕೇಳಿ ಸಂತೋಷಪಡುತ್ತೇವೆ.

ಈ ತಾ. 6 ರಿಂದ 8ನೆ ವರೆಗೆ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ಸಹಕಾರಿ ತತ್ವಗಳು, ಬ್ಯಾಂಕ್ ಕೀಪಿಂಗ್ ಮತ್ತು ಆಡಿಟ್—ಇವುಗಳ ಟೆಸ್ಟ್ ಪರೀಕ್ಷೆಯು ನಡೆಯಿತು.

ಉಪಾಧ್ಯಾಯರ ತರಬೇತಿಗೆ ಹೋಗಿ ಬಂದಿದ್ದ ಕಕ್ಕಬೆ ಗ್ರಾಮದ ಮಂಡ ರಾ. ಬಿದ್ದಂಡ ಅಚ್ಚಯ್ಯನವರು ಈ ತಾ. 7ರಲ್ಲಿ ಮಡಿಕೇರಿ ಆಸ್ಪತ್ರೆಯಲ್ಲಿ ತೀರಾಧೀನರಾದರು.

ಮಡಿಕೇರಿ ವೇದಾಂತ ಸಂಘದ ಆಶ್ರಯದಲ್ಲಿ ಬೆಂಗಳೂರಿನ ಶ್ರೀಯುತ ರಾಮಚಂದ್ರದಾಸಂವರು ಈ ತಾ. 5 ರಲ್ಲಿ ಜಾವಿನಾರ್ಯರ ಸಂಘದ ಹಾಲಿನಲ್ಲಿ 'ಶಾಶ್ವತೀ ಕಲ್ಯಾಣ' ವೆಂಬ ಹುಕಥೆಯನ್ನು ಮಾಡಿದರು.

ಕೈದರವಾಡು ಮಿಲಿಟರಿಯಲ್ಲಿರುವ ಮೇಜರ್ ಜೆಪ್ಪುಡಿರ ಎಚ್. ಅಚ್ಚಯ್ಯನವರಿಗೆ ಲೆಫ್ಟೆನೆಂಟ್ ಕರ್ನಲ್ ಪದವಿ ಬ್ರೆವೆಟಿಯಾಗಿ ಈಗ ಸಂತೋಷಪಡುತ್ತೇವೆ.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಸಾಲ ನಿವಾರಣೆ ಬೋರ್ಡಿನ ಡೈರೆಕ್ಟರುಗಳ ಮೀಟಿಂಗುಗಳು ಈ ತಾ 9 ರಲ್ಲಿ ಮೂರ್ನಾಡಿನಲ್ಲಿಯೂ, ತಾ 11 ರಲ್ಲಿ ಗೋಣಿಕೊಪ್ಪಲಲ್ಲಿಯೂ ಮತ್ತು ತಾ. 16 ರಲ್ಲಿ ಅಮ್ಮತ್ತಿಯಲ್ಲಿಯೂ ನಡೆಯುವವು

ಮೂರ್ನಾಡು ಶಾಲೆಯಲ್ಲಿ ಉಪಾಧ್ಯಾಯರಾಗಿರುವ ಮೇ. ಚೇಂದಿರ ಕಾರ್ಯಪ್ಪನವರು ಮೈಸೂರು ಯುನಿವರ್ಸಿಟಿಯ ಉಪಾಧ್ಯಾಯರ ತರಬೇತಿನ ಬಿ. ಟಿ. ಪರೀಕ್ಷೆಯಲ್ಲಿ ಪಾಸಾಗಿರುವರೆಂದು ತಿಳಿಯಬರುತ್ತದೆ. ಇವರನ್ನು ಅಭಿನಂದಿಸುತ್ತೇವೆ.

ಮಡಿಕೇರಿಯ ಕಾಯಿಲೆಯ ವಿಚಾರವು ಹೆಚ್ಚಿನ ತರಬೇತಿಗಾಗಿ ಬೆಂಗಳೂರಿಗೆ ಹೋಗಿದ್ದ ಸಬ್ ಅಸ್ಸಿಸ್ಟೆಂಟ್ ಸರ್ಜನ್ ಮೇ. ಕೋಡಂಡ ಕಾರ್ಯಪ್ಪನವರು ವಾಪಸು ಬಂದು ಈ ತಾ. 1ರಲ್ಲಿ ಮಡಿಕೇರಿ ಆಸ್ಪತ್ರೆಯ ಸರ್ಜನ್ ಚಾರ್ಜನ್ನು ವಹಿಸಿಕೊಂಡರು.

ರಾ ಸಾ ಬಿ. ಶ್ರೀಪತಿರಾಮರು ಭಾಗಮಂಡಲ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿಯೂ, ಮೇ. ಬಿ. ಕಾಳೇಗೌಡರು ಸಿದ್ದಂಗಾಲ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿಯೂ ಆರಿಸಲ್ಪಟ್ಟಿರುವರು.

ಶ್ರೀಮಂಗಲನಾಡು ನೆಮ್ಮಲೆ ಗ್ರಾಮದ ಜೋಟ್ಟೆಯಂಡ ಮೂಡ ಗಣಪತಿಯವರನ್ನು ಕಳೆದ ಹುತ್ರಿ ಹಬ್ಬದಲ್ಲಿ ಕೊಂದ ದೆಂಬ ಖೂನಿ ಕೇಸಿನಲ್ಲಿ ಅಪರಾಧಿಗಳಾಗಿದ್ದ ಅವರ ಮನೆಯವರು ತಪ್ಪಿಕಸ್ಥರಲ್ಲವೆಂದು ಈ ತಾ. 4ರಲ್ಲಿ ಸೆಷನ್ಸ್ ಜಡ್ಜರು ತೀರ್ಪು ಕೊಟ್ಟಿರುವರು.

ಕೊಡಗು ಗವ್ವಡ ವಿದ್ಯಾ ಸಂಘದ ವಾರ್ಷಿಕ ಮಹಾಸಭೆಯು ಈ ತಾ. 17ನೇ ಆದಿತ್ಯವಾರ ಬೆಳಿಗ್ಗೆ 10ಗಂಟೆಗೆ ಬಲಮುರಿ ಗ್ರಾಮದಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಹೆಡ್ ಮೂಸ್ಟರಾದ ಮೇ. ಸಿ. ಯಂ. ರಾಮರಾಯರ ಅಧ್ಯಕ್ಷತೆಯಲ್ಲಿ ನಡಿಯುವದು.

ಈ ತಾ. 1ರಲ್ಲಿ ನಡೆದ ಕಮಿಷನರ ಹಾಕಿ ಕಪ್ ಟೂರ್ನಮೆಂಟಿನ ಜಿಲ್ಲೆರು ಆಟದಲ್ಲಿ ಟಿ ಟೋರಿಯಲ್ ಪಟಲಾವಿನ ಟೀಮಿನವರು 'ಬೆಂಗಳೂರು ಚ್ಯಾಂಪಿಯನ್ಸ್ (ಈ ಮೊದಲಿನ ವಾರ್ಡರ್ಸ್) ಹೆಸರಿನ ಟೀಮಿನವರನ್ನು ಒಂದು ಗೋಲಿನಿಂದ ಸೋಲಿಸಿ ಇನಾಮಿನ ಒಟ್ಟನ್ನು ಗೆದ್ದರು. ಗೆದ್ದವರಿಗೆ ಬಟ್ಟನ್ನು ಮೇ. ಕೊಡಂದೆರ ಮೂದಪ್ಪನವರು ಕೊಟ್ಟರು.

ಕಡಿಯತ್ತೂರು ಗ್ರಾಮದ ನಾಟೆಕೋಳಂಡ ಮನೆಯ ಕೆಲವರು ಮತ್ತು ಇನ್ನಿತರ ಕೆಲವರು ಈ ತಾ. 6ರಲ್ಲಿ ಸೇಂದಿ ಕುಡಿದು ಜಗಳವಾಡಿದಲ್ಲಿ ನಾಟೆಕೋಳಂಡ ಐಯ್ಯಪ್ಪನೆಂಬವರು ಅಣ್ಣ ಮುದ್ದಪ್ಪನವರಿಗೆ ಚಾಕುವಿಂದ ತಿವಿದು ಪೂರಾ ಜಖಂ ಆಗಿ ಮಡಿಕೇರಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಮೃತರಾದರೆಂದು ವರ್ತಮಾನ.

ಕಾಂಗ್ರೆಸ್ ಕಮಿಟಿಗಳಲ್ಲಿ ವಿನಂತಿ.

ಬಂಧುಗಳೇ,

ವಿಶ್ವದ ಇತಿಹಾಸದಲ್ಲಿ ಭಾರತೀಯರು ತನ್ನ ಜನ್ಮಸಿದ್ಧವಾದ ಹಕ್ಕನ್ನು, ಸ್ವಾತಂತ್ರ್ಯವನ್ನು ಪಡೆಯುವದಕ್ಕೆ 1930 ರಿಂದ 1934ನೇ ಏಪ್ರಿಲ್ ವರೆಗೆ ಹೋರಾಡಿದ ಶಾಂತಿ ಸಂಗ್ರಾಮದ ಪ್ರಕರಣವು ಉಜ್ವಲವಾಗಿ ಅಕ್ಷರಾಮಾಲೆಯಲ್ಲಿ ಉಳಿಯುವುದರಲ್ಲಿ ಸಂದೇಹವಿಲ್ಲ. ಆ ಪ್ರಕರಣದಲ್ಲಿ ನಮ್ಮ ಕರ್ನಾಟಕದ ಶಾಂತಿ ಸಂಗ್ರಾಮದ ಇತಿಹಾಸವು ಮುಕುಟ ಮಣಿಯಾಗಿ ಶೋಭಿಸುವುದು ಇದು ನಿರ್ವಿವಾದವಾದುದು. ಕರ್ನಾಟಕವು ತೋರಿದ ಶೂರತನವು ಅಚ್ಚಳಿಯದೇ ಹೊಳೆಯುತ್ತ ಉಳಿಯಬೇಕಾದುದು. ಇದು ಸಾತ್ಪರ್ಯಂತ ಇತಿಹಾಸವು ಅನ್ಯ ಪ್ರಾಂತೀಯರಿಗೆ ಅಷ್ಟೇಕೆ ಕನ್ನಡಿಗರಿಗೆ ಗೊತ್ತಿಲ್ಲದೀವುದು ಅತ್ಯಂತ ಶೋಚನೀಯವಾದುದು. ಈ ಕೊರತೆಯನ್ನು ನೀಗುವುದಕ್ಕಾಗಿ ಕರ್ನಾಟಕದ ಶಾಂತಿ ಸಂಗ್ರಾಮದ ಇತಿಹಾಸವನ್ನು ಸಾಧ್ಯವಿದಷ್ಟು ಸಾಧ್ಯಂತವಾಗಿ ಒರೆಯುವ ಬೇಕೆಂಬ ಸಾಹಸದ ಕಾರ್ಯಕ್ಕೆ ಕೈ ಹಾಕಿದ್ದೇನೆ. ಅದಕ್ಕೆ ಇದಕ್ಕೆ ಸರ್ವ ಕಾಂಗ್ರೆಸ್ ಕಮಿಟಿಗಳೂ. ಕಾರ್ಯಕರ್ತರೂ ಬೆಂಬಲ ಪ್ರೋತ್ಸಾಹ ಕೊಟ್ಟು ನೆರವಾದರೆ ಮಾತ್ರ ಸಾಧಿಸುವ ಕಾರ್ಯವಿದು. ಈಗಾಗಲೇ ಈ ವಿಷಯವನ್ನು ಕೆಲವು ಮಂದಿ ಎತ್ತಿದಾಗ ಶ್ರೀಮಂತ ಆಂದಾನಪ್ಪ ದೊಡ್ಡ ವೇಟಿಯವರೂ ಶ್ರೀಮಾನ್ ದಿವಾಕರಜಿ ಪ್ರೋತ್ಸಾಹನ ಆಶೀರ್ವಚನ ಸಿದ್ದಾರೆ. ಈ ಕಾರ್ಯವನ್ನು 3—4 ತಿಂಗಳುಗಳಲ್ಲಿಯೇ ಮುಗಿಸಿ ಕನ್ನಡಿಗರ ಕೈಯಲ್ಲಿ ಅರ್ಪಿಸಬೇಕೆಂದು ಸಂಕಲ್ಪಿಸಿದ್ದೇನೆ. ಆದ್ದರಿಂದ ದಯವಿಟ್ಟು ಎಲ್ಲ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ತಮ್ಮ ತಾಲೂಕಿನ ವಿಷಯವನ್ನು ಕೆಳಗೆ ಬರೆದ ಪ್ರಕಾರ ಕೂಡಲೇ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕೆಂದು ಸವ್ಯಭಾವದಿಂದ ಬೇಡುತ್ತೇನೆ.

1 ಜಿಲ್ಲೆಯ ತಾಲೂಕಿನ ಪೂರ್ವ ಇತಿಹಾಸವು 1930ರ ವರೆಗೆ 1930—1934ನೇ ಏಪ್ರಿಲ್ ವರೆಗೆ.
ನಡೆದ ಸಂಗ್ರಾಮದ ವಿವರ ಕೆಳಗಿನಂತೆ ಕಳುಹಿಸಬೇಕಾಗಿ ವಿನ್ನಹ.

2. ತಾಲೂಕಿನಲ್ಲಿ ಸೆರೆ ಮನೆಗೆ ಹೋದವರೆಷ್ಟು? ಅವರಲ್ಲಿ ಸ್ತ್ರೀಯರೆಷ್ಟು? 15 ವರ್ಷದ ಒಳಗಿನವರೆಷ್ಟು? ಅವರಲ್ಲಿ ಬ್ರಾಹ್ಮಣರೆಷ್ಟು? ಲಿಂಗಾಯಿತರೆಷ್ಟು? ಮುಸಲ್ಮಾನರೆಷ್ಟು? ಉಳಿದ ಜಾತಿಯವರೆಷ್ಟು?

(3) ವಿಶೇಷ ನಷ್ಟ ಮತ್ತು ದಂಡಕ್ಕೆ ಗುರಿಯಾದ ಮನೆತನಗಳು ಎಷ್ಟು? ಅವುಗಳ ನಷ್ಟದ ಕಾರಣಗಳೇನು? ಅವುಗಳ ವಿವರಣೆ.

(4) ಫಟಿಕೆ ತಿಕ್ಕಿಗೆ ಗುರಿಯಾದವರು ಎಷ್ಟು?
(5) ಅರ್ಧನೇನ್ನಿಗೆ ತುತ್ತಾದವರು ಎಷ್ಟು?
(6) ಕೈಕೊಂಡ ಕಾರ್ಯಕ್ರಮಗಳು.
(7) ಕಿಕ್ಕೇಟರರು ಜಪ್ತಿಗಳು ಎಷ್ಟು? ಯಾವ ನಿಮಿತ್ತ? ಗಾಯ ಹೊಂದಿದವರೆಷ್ಟು?
(8) ಗೋಳೀ ಬಾಂಬುಗಳು ಎಷ್ಟು?
(9) ಪ್ರತಿಬಂಧಕ ಕಲಮುಗಳು ಯಾವವು?
(10) ವೃತ್ತ ಪತ್ರಿಕೆಗಳು ಯಾವವು ಬಂದಾದವು?
(11) ಯಾವ ಯಾವ ಕರ ಪತ್ರಿಕೆಗಳು ಹೊರಟವು
(12) ಬೇಕಾಯಿ ದೇಶೀಯರ ಆದ ಸಂಸ್ಥೆಗಳಾವವು? ಎಷ್ಟು?
(13) ಕಾಯಿದೆ ಭಂಗ ಕರ ಒಂದಿಯ ಪ್ರಾರಂಭ ಮತ್ತು ಅದರ ಪ್ರಗತಿ.
(14) ಅವಶ್ಯಕವಾದ ಮಾಹಿತಿಯನ್ನು ತಾಲೂಕಿನಲ್ಲಿ ಪ್ರಾಮುಖ್ಯವಾಗಿ ಭಾಗವಹಿಸಿದವರು ಯಾರು?

ಟಿಪ್ಪಣಿ:—ಪ್ರತಿಯೊಬ್ಬ ಕಾರ್ಯಕರ್ತರಿಗೂ ಪತ್ರ ಬರೆದು ಮಾಹಿತಿ ತರಿಸಿಕೊಳ್ಳುವುದು ಸಾಧ್ಯವಿಲ್ಲ ಈ ಪ್ರಕಟನೆಯೇ ತನಗೆ ಬರೆದ ಪತ್ರವೆಂದು ತಿಳಿದು ಕೂಡಲೇ ಮಾಹಿತಿ ಕಳುಹಿಸಬೇಕಾಗಿ ಕೋರಿದೆ.

ವಿಳಾಸ— ಗುರುನಾಥ ಜೋಷಿ.

ಹಕ್ಕಲಿ ಪೋಸ್ಟು,
ಅಬ್ಬಿಗೇರಿ, ಧಾರವಾಡ.

ಪತ್ರವ್ಯವಹಾರ.

[ಪತ್ರಿಕಾವಾರರು ಪಡುವ ಅಭಿವ್ಯಾಯಗಳಿಗೆ ಪತ್ರಿಕೆಯವರು ಜವಾಬ್ದಾರರಲ್ಲ. ಸಂ]

ವಿದ್ಯಾ ಇಲಾಖೆಯಲ್ಲಿ ವಿನಂತಿ.

ಅಯ್ಯಾ,

ನಮ್ಮ ದೇಶದ ಹೈಸ್ಕೂಲುಗಳು ಮತ್ತು ಎಲ್ಲಾ ಶಾಲೆಗಳ ಒಬ್ಬ ಇನ್ಸ್‌ಪೆಕ್ಟರನ್ನು ಪಿಡಬ್ಲಿತಕ್ಕೆ ಒಳಪಟ್ಟು ಪಾಠ ಕ್ರಮಗಳಲ್ಲಿ ಒಂದೇಯವಾಗಿದ್ದರೂ III ಫಾರಂ ಪರೀಕ್ಷೆಯು ಸ್ಕೂಲು ಶಾಪತ್ರಗಳು ಎಂಬ ಹೈಸ್ಕೂಲುಗಳ ನಿಯಮಗಳಿಗೆ ಸಮ್ಮಂಧಪಟ್ಟು ಪ್ರತ್ಯೇಕ ಪ್ರತ್ಯೇಕವಾಗಿ ತಯಾರಿಸಲ್ಪಡುವದು ಅಗತ್ಯವೆನಿಸುವದು ತಿಳಿಯುವಾಗ ವಿಲ್ಲ.

ಮಡಿಕೇರಿ ಹೈಸ್ಕೂಲಿಗೆ ಸೇರಬೇಕಿರುವ III ಫಾರಂ ವಿದ್ಯಾರ್ಥಿಯು ಅಲ್ಲಿಯ ಸೆಂಟರಿನಲ್ಲಿ ನಡೆಯುವ ಪರೀಕ್ಷೆಗೆ ಕೂರಬೇಕೆಂತಲೂ, ಅದರಂತೆ ಸೇರಬೇಕಾದ ಪೇಟೆ ಹೈಸ್ಕೂಲಿಗೆ ಸೇರಬೇಕಾದ ವಿದ್ಯಾರ್ಥಿಯು ಅಲ್ಲಿಯ ಸೆಂಟರಿನಲ್ಲಿ ನಡೆಯುವ ಪರೀಕ್ಷೆಗೆ ಕೂರಬೇಕೆಂತಲೂ ತೀರ್ಮಾನಿಸಿಕೊಂಡಿರುವದು ಯಾವ ನ್ಯಾಯವೆಂಬದು ಗೊತ್ತಾಗುವದಿಲ್ಲ.

V ಸ್ಟಾಂಡರ್ಡಿನ ಪರೀಕ್ಷೆಗೆ ಸಹ ಇದೇರೀತಿಯೇ ಹೈಸ್ಕೂಲಿಗೆ ಸೇರಬೇಕಾದ ವಿದ್ಯಾರ್ಥಿಗಳು ತಮ್ಮ ತಮ್ಮ ಹೈಸ್ಕೂಲುಗಳಲ್ಲಿ ಪರೀಕ್ಷೆಗೆ ಬೇಕಾದಲ್ಲಿ ಹತ್ತಿರದಲ್ಲಿರುವ ಮಿಡಲ್ ಶಾಲೆಗಳಿಗೆ ಸೇರಲಿಚ್ಛೆಯುಳ್ಳ ವಿದ್ಯಾರ್ಥಿಗಳು ಸುಪರ್‌ವೈಜರರ ಜವಾಬ್ದಾರಿಕೆಯಿಂದ ನಡಿಸಲ್ಪಡುವ ಪರೀಕ್ಷೆಗೆ ಕೂತರೆ ಸಾಕೆಂತಲೂ ಪರೀಕ್ಷೆ ನಡಿಸುವವರು ಇಚ್ಛಾನುಸಾರ ಪ್ರಶ್ನಾಪತ್ರಗಳನ್ನು ಪ್ರತ್ಯೇಕ ಪ್ರತ್ಯೇಕ ಮಾಡಿಕೊಂಡು ಪರೀಕ್ಷೆ ನಡಿಸುತ್ತಿರುವದು ಅನೇಕ ಬಡ ವಿದ್ಯಾರ್ಥಿಗಳಿಗೆ ಎಷ್ಟೆಂದರು ತೊಂದರೆ ಮತ್ತು ಅನ್ಯಾಯವಾಗುತ್ತಿದೆ ಎಂಬದನ್ನು ವಿದ್ಯಾ ಇಲಾಖೆಯವರು ಗಮನಿಸಿದೆ ಮನಬಂದಂತೆ ಮಾಡುತ್ತಿರುವದನ್ನು ನಮ್ಮ ಕವುನ್ಸಿಲ್ ಮೆಂಬರುಗಳು ಮತ್ತು ಡಿ. ಬೋ. ಮೆಂಬರುಗಳು ಸಮ್ಮಂಧಪಟ್ಟ ಇಲಾಖೆಯವರ ಗಮನಕ್ಕೆ ತಂದು ಪ್ರಶ್ನಾ ಪತ್ರಗಳನ್ನು ಏಕರೂಪಕ್ಕೆ ತರುವಂತೆ ಮಾಡಿರುವದಕ್ಕೆ ಎಷ್ಟು ಧನ್ಯವಾದಸಲ್ಪಟ್ಟರೂ ಸಾಲದು.

ಆಯಾಯ ಸೆಂಟರಿನಲ್ಲಿ ಪಾಸಾದ ವಿದ್ಯಾರ್ಥಿಗಳು ಆಯಾಯ ಹೈಸ್ಕೂಲಿಗೇನೇ ಸೇರಬೇಕೆಂಬದು ಯಾವ ನೀತಿಯನ್ನು ಅನುಸರಿಸಿ ಮಾಡಿಕೊಂಡ ತೀರ್ಪು ಎಂಬದು ತಿಳಿದಿದ್ದಾಗಿದೆ.

V ಸ್ಟೇಂಡಾರ್ಡಿನ ಒಬ್ಬ ವಿದ್ಯಾರ್ಥಿನಿಯು ವೀರರಾಜೇಂದ್ರಪೇಟೆ ಹೈಸ್ಕೂಲಿನಲ್ಲಿ ನಡಿಸಿದ ಪರೀಕ್ಷೆಗೆ ಕೂತು ಸೋತಳೆಂತಲೂ ಸುಪರ್‌ವೈಜರರವರಿಂದ ನಡಿಸಿದ ಪರೀಕ್ಷೆಗೆ ಕೂತು ಪಾಸಾದಳೆಂತಲೂ ಹೇಳಿದರೆ ಯಾರಿಗೆ ತಾನೆ ಆಶ್ಚರ್ಯವಾಗದಿರದು. ಅದ ವೇಲೆ ಪ್ರತ್ಯೇಕ ಪ್ರತ್ಯೇಕವಾಗಿ ನಡಿಸಲ್ಪಟ್ಟಿರುವ V ಸ್ಟಾಂಡರ್ಡಿನ ಪರೀಕ್ಷೆಯ ಫಲಿತಾಂಶದಿಂದ ಎಷ್ಟೆಂದು ವಿದ್ಯಾರ್ಥಿಗಳಿಗೆ ಅನ್ಯಾಯಗಳಾಗಿವೆ ಎಂಬದನ್ನು ತಿಳಿಯಬೇಕಾದರೆ ಈ ಸಮ್ಮಂಧ ತೀರ್ಮಾನಿಸಲ್ಪಟ್ಟಿರುವ ಪ್ರಶ್ನಾಪತ್ರಗಳನ್ನು ಪರಿಶೀಲಿಸಿದರೆ ವೇದ್ಯವಾಗಬಹುದು.

V ಸ್ಟಾಂಡರ್ಡಿನ ವಿದ್ಯಾರ್ಥಿಗಳ ಸೋಲುಸೋಕೆಗಳಿಗೆ ಮತ್ತು ತೊಂದರೆಗೂ ಇನ್ನೊಂದು ಕಾರಣವೆಯೆಂದರೆ—ಹಳ್ಳಿ ಶಾಲೆಗಳಲ್ಲಿ ಓದುತ್ತಿರುವ ಸಂಣ ಸಂಣ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಬೇರೆ ಶಾಲೆಗಳಿಗೆ ಕಳುಹಿಸುವದರಿಂದ ಅವರು ಕಂಡು ಕೇಳದ ಸ್ಕೂಲುಗಳನ್ನು ಮತ್ತು ಮೊಸ್ಟರುಗಳನ್ನು ನೋಡಿ ಮನಸಿನಲ್ಲಿ ಗಲಿಬಿಲಿಗೊಂಡಂತಾಗುವದಲ್ಲದೆ 10—12 ಮೈಲುಗಳ ದೂರ ಪ್ರದೇಶಗಳಿಂದ ನಡೆದು ಬಂದ ಆಯಾಸದಿಂದ ಬಳಲಿದ ಎಳೆ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಕೂತು ಸರಿಯಾದ ಉತ್ತರಗಳನ್ನು ಸಹ ಬರೆಯಲಾರದಂತವರಾಗುತ್ತಾರೆಂದು ವಿದ್ಯಾವಂತರಿಗೆ ತಿಳಿದ ವಿಷಯವಾಗಿದ್ದರೂ ಈ ವರೆಗೆ ಅದನ್ನು ತಪ್ಪಿಸಲು ಗಮನಕೊಡದೆ ಇರುವದಕ್ಕೆ ವಿಷಾದಿಸಬೇಕಾಗಿದೆ.

ಮೇಲಿನ ಕಾರಣಗಳಿಂದ ಪಾಸಾಗದೆ ಇರುವದನ್ನು ಮಾತ್ರವಲ್ಲ, ಅವರಿಗೂ ಅವರ ಬಡ ತಂದೆ ತಾಯಿಗಳಿಗೂ ಆಗುವ ತೊಂದರೆಯನ್ನು ಸಹ ಪರಿಹರಿಸುವಂತೆ ಆಯಾಯ ವಿದ್ಯಾಭ್ಯಾಸ ಮಾಡುತ್ತಿರುವ ಶಾಲೆಗಳಲ್ಲೇ ಪರೀಕ್ಷೆಯು ನಡಿಸಲ್ಪಡಬೇಕು. ಪಕ್ಷಪಾತಗಳು ನಡೆಯದಂತೆ ನೋಡಿಕೊಳ್ಳಲು ಸಮಂಜಸದಲ್ಲಿ ಇರುವ ಶಾಲೆಯ ಉಪಾಧ್ಯಾಯರುಗಳನ್ನು ಮೇಲ್ವಿಚಾರಣೆಗಾಗಿ ಒಂದೆರಡು ದಿನಕ್ಕೆ ಬದಲಿ ಮಾಡಿಕೊಳ್ಳಬೇಕು.

ಮುಂದಕ್ಕಾದರೂ ವಿದ್ಯಾರ್ಥಿಗಳಿಗೆ ಆಗುತ್ತಿರುವ ಈ ನ್ಯಾಯಾ ಮತ್ತು ತೊಂದರೆಗಳನ್ನು ತಪ್ಪಿಸುವಂತೆ 2 ಹೈಸ್ಕೂಲುಗಳ ಹೆಡ್ಡ್ ಮಾಸ್ಟರುಗಳು, 2 ಅಸಿಸ್ಟೆಂಟ್ ಮಾಸ್ಟರುಗಳು, ಡಿಪ್ಟಿ ಇನ್ಸ್‌ಪೆಕ್ಟರರೂ ಮತ್ತು 2 ಸುಪರ್‌ವೈಜರುಗಳೂ ಅಂತೂ ಈ 7 ಮಂದಿ ಇವರು ಈ ಎರಡು ತರಗತಿಯ ಸಮ್ಮಂಧ ಪರೀಕ್ಷೆಗೆ ಇರುವ ಪ್ರಶ್ನಾಪತ್ರಗಳನ್ನು ತೆಯಾರಿಸುವಂತೆ ಮಾಡುವದಲ್ಲದೆ ಸರ್ಟಿಫಿಕೇಟು ಪಡೆದ ವಿದ್ಯಾರ್ಥಿಯಿಂದ ಯಾವ ಶಾಲೆಗೂ ಸೇರಿಕೊಳ್ಳಬಹುದೆಂಬಂತೆ ಮಾಡಿ ವಿದ್ಯಾರ್ಥಿಗಳಿಗೂ ಬಡ ತಂದೆ ತಾಯಿಗಳಿಗೂ ಇರುವ ಈಗಿನ ತೊಂದರೆ ಮತ್ತು ನಷ್ಟವನ್ನು ಪರಿಹರಿಸಿಕೊಡಲು ಸರ್ಕಾರದವರಿಗೆ ವಿನಂತಿಯಾಗಿ ಕೋರಿದೆ.

ಕೆ. ಬಿ. ಸಿ.

ಪ್ರಕಟಣೆ.

Repairing chairs, easy chairs, cane chairs, cots etc. in rattan will be done in singles, doubles and diamond at moderate charges.

ಬೆತ್ತದ ಕುರ್ಚಿ, ಆರಾಮು ಕುರ್ಚಿ ಮತ್ತು ಮಂಚ ಮುಂತಾದುವುಗಳನ್ನು ತೃಪ್ತಿಕರವಾಗಿ ಅತಿ ಸುಲಭ ಚಾರ್ಜಿನಲ್ಲಿ ಬೆತ್ತದಿಂದ ಮಾಡಲಾಗುವುದು.

Apply to:—

P. S. RAMAPPA,
Rattan Works,
MacDowell & Co., Buildings,
Mercara.
4—4

ಇಂದೇ ಆರಂಭಿಸಿರಿ!

ಸುಪ್ರಸಿದ್ಧ

ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಂಜಾಟಲೆಯು ಏಣಾಮ್ಸ್ಟೇರಿರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ಅತ್ಯುತ್ತಮ ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯನ್ನು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನಿಗೆ ರೂ. 1.

ಹೆಚ್ಚಿನ ವಿವರಕ್ಕೆ, ಗ್ರಾಹಕರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮುಶಲಪ್ರಶ್ನೆಯನ್ನೀದಿರಿ.

ಆತಂಕನಿಗ್ರಹ ಫಾರ್ಮಸಿ, ಚಿಕ್ಕಬೇಕೆಬಾಳ,
52—6 ಬೆಂಗಳೂರು ಸಿಟಿ.

WANTED.

Wanted agents to popularise HOUSE PURCHASE, MORTGAGE LOAN and TEN RUPEES DEBENTURE (Life & Marriage) SCHEMES. For Particulars and Prospectuses apply to—

The Premier Insurance and Building Society Madras Ltd

Or Our Special Agent—

Mr. G, Nagiah Naidu,
C/o P. Vijayaratnam Mudaliar.
P. W. D. Office,
Mercara (Coorg)
3—3

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯು ಬಂದಾ ಹಣವನ್ನು ವಸೂಲಾತ್ತಿಡಲು ಇಟ್ಟಿಕೊಂಡಿದ್ದವರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನವರು ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂದೇಪಂಡ ಸೋಮೆಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸುಮ ಮಾಚಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಎ. ಮುಮ್ಮಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಬಿ. ಮಾಚಮೆಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಪ್ಪೋಳಂಡ ಮಾಚಯ್ಯನವರು,
ನಿಡುಮಾಳಂಪೇಟೆ—... ಕೆ. ಮೊಣ್ಣಪ್ಪನವರು
ಗೋಣಿಕೊಪ್ಪ—ಮೆ. ಬೆಳ್ಳಿಯಂಡ ಯಂ. ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಸ್ಟಾಂಪು ಅವ ರಶೀತಿ ಪುಸ್ತಕಗಳನ್ನೆದ್ದು ಯಾರಿಗೂ ಹಣ ಕೊಡಬಾರದಾಗಿ ಈ ಮೂಲಕ ತಿಳಿಸುತ್ತಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮರ್ಕಾರ.

ಸುಲಿಗೆ ನಿರ್ಮೂಲವಾಗದೆ ಯುದ್ಧ ನಿವಾರಣೆಯೂಗದು.

ಮಹಾತ್ಮರ ತತ್ವವೇ ಇದಕ್ಕೆ ತಕ್ಕ ಹಾದಿ.

(ಪ. ಜವಾಹರ್‌ಲಾಲರಿಂದ.)

[ಶ್ರೀ ಜವಾಹರ್‌ಲಾಲ್ ನೆಹರುರವರು ಈಗಿನ ಶಾಂತಿ ಸ್ಥಾಪನೆಯ ವಿಷಯ ಹೊರಬಿದ್ದಿರುವ ಕೆಲವು ತಜ್ಞರ ಅಭಿಪ್ರಾಯಗಳನ್ನು ಕುರಿತು ಈ ವಾರ ತಮ್ಮ ಅಭಿಪ್ರಾಯವನ್ನು 'ಟೈಮ್ಸ್ ಅಂಡ್ ಟೈಡ್' ಎಂಬ ಪತ್ರಿಕೆಯಲ್ಲಿ ಬರೆದಿರುವರು.]

'ಬ್ರಿಟನ್ನಿನ ಕಾಮನ್ಸ್ ಸಭೆಯಲ್ಲಿ ಪ್ರಧಾನ ಮಂತ್ರಿಗಳಾದ ಮೆ. ಲ್ಯಾಡ್ ಜಾರ್ಜ್‌ರವರು ಯೂರೋಪಿನ ವಿಷಮ ಪರಿಸ್ಥಿತಿಯನ್ನು ಕುರಿತು 'ಇರುವವರಿಗೂ' ('Haves' ಎಂದರೆ ವಸಾಹತುಗಳಿರುವ ರಾಷ್ಟ್ರವುಳ್ಳವರೆಂದರ್ಥ) ಮತ್ತು 'ಇಲ್ಲದವರಿಗೂ' ('Have-nots' ಎಂದರೆ ವಸಾಹತುಗಳಿಲ್ಲದ ರಾಷ್ಟ್ರವುಳ್ಳವರೆಂದರ್ಥ) ಇರುವ ಮನಸ್ತಾಪಗಳನ್ನು ನಿವಾರಿಸಿದರು. ವಸಾಹತುಗಳಿರುವ ರಾಷ್ಟ್ರಗಳಿಗೆ ತಮ್ಮ ಕೈಗಾರಿಕೆಗಳನ್ನು ವೃದ್ಧಿಸಿಕೊಳ್ಳಲು ಹೇರಳವಾದಷ್ಟು ಕಚ್ಚಾ ಮೂಲಗಳೂ ಮತ್ತು ತಮ್ಮಲ್ಲಿ ತಯಾರಾದ ಸಾಮಾನುಗಳಿಗೆ ಸುಲಭವಾದ ಮಾರ್ಕಟ್ಟುಗಳೂ ಸಿಕ್ಕುತ್ತವೆ. ವಸಾಹತುಗಳಿಲ್ಲದ ರಾಷ್ಟ್ರಗಳಿಗೆ ಈಗಿನಂತಹ ದುಸ್ಥಿತಿಗಳಲ್ಲಿ ಈ ಸೌಲಭ್ಯವಿಲ್ಲದ ಕಾರಣ ಅವರು ಯಾವಾಗಲೂ ವಸಾಹತುಗಳನ್ನು ಪಡೆಯಲು ಯುದ್ಧ ಹೂಡುವ ಯೋಚನೆಯಲ್ಲಿರುವರು. ಇವರನ್ನು ಒಪ್ಪಂದ ಒಡಂಬಡಿಕೆಗಳೆಬ ಲಂಜದ ಮುಖಾಂತರ ಯುದ್ಧಕ್ಕೆ ಸೈಹಾಕದಂತೆ ತಡೆಯಬೇಕಾಗುತ್ತದೆ. ಈ ಪ್ರಕಾರ 'ಇರುವ' ಮತ್ತು 'ಇಲ್ಲದ' ರಾಷ್ಟ್ರಗಳೊಳಗೆ ಯಾವತ್ತೂ ವೈಷಮ್ಯಗಳು ಹೆಚ್ಚಿ ಯುದ್ಧ ಕಾರ್ಮೋಡಗಳು ಎಲ್ಲೆಲ್ಲಿ ಕಾಣಿಸುತ್ತಿರುವದಾಗಿದೆ. ಈ ರೀತಿ ಪ್ರಧಾನ ಸಚಿವರು 'ಇಲ್ಲದವರಿ' ಗಾಗಿ ತಲ್ಲಣಿಸುವುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಹೇಗಾದರೆ ಇಂಥ 'ವಸಾಹತುಗಳಲ್ಲಿರುವವರಿಗೆ ಈ ಸಮಸ್ಯೆಯಲ್ಲಿ ಯಾವ ಜವಾಬ್ದಾರಿಯೂ ಇಲ್ಲವೇ? ಈ ವಸಾಹತುಗಳಿಂದ ಸುಲಿಯಲ್ಪಡುತ್ತಿರುವ ಕೊಳ್ಳೆಯನ್ನು ವಸಾಹತುಗಳಿಗಾಗಿ ಹಾತೊರೆಯುತ್ತ ಯುದ್ಧಕ್ಕಾಗಿ ಭೂಟಿಸುತ್ತಿರುವ (Imperialist) ರಾಷ್ಟ್ರಗಳೊಳಗೆ ಹಂಚಿದಲ್ಲಿ ಶಾಂತಿಸ್ಥಾಪನೆಯಾಗುವುದೇ? ಇಲ್ಲ

ನಿಜವಾದ ಸಮಸ್ಯೆ.

'ಇಲ್ಲದ' ಮತ್ತು 'ಇರುವ' ಎಂಬ ಪಂಗಡಗಳೊಳಗಿನ ವೈಷಮ್ಯವೇ ಈಗಿನ ಯುದ್ಧಾಪೇಕ್ಷೆಗೆ ಕಾರಣವೆಂದಾದರೆ ಒಂದರ್ಥದಲ್ಲಿ ಯಾಗಿಯೂ ನಮ್ಮ ಮಂತ್ರಿಗಳ ಅಭಿಪ್ರಾಯವು ತಪ್ಪು. ಯಾಕ್ಕೆಂದರೆ ಒಲಾಢ್ಯವಾಗಿ, ಸ್ವತಂತ್ರವಾಗಿ ರಾಜ್ಯವಿಸ್ತರಣಾ ಕಾಂಕ್ಷೆಯವಾಗಿರುವ ರಾಷ್ಟ್ರಗಳನ್ನು ಇವರು 'ಇಲ್ಲದ' ರಾಷ್ಟ್ರಗಳೆಂದಿರುವರು. ಇದು ಶುದ್ಧ ತಪ್ಪು. ನಿಜವಾಗಿಯೂ 'ಇಲ್ಲದ' ರಾಷ್ಟ್ರಗಳೆಂದರೆ ಪರಕೀಯರಿಂದ ಸುಲಿಗೆಗೆಯ್ಯಲ್ಪಡುವ ರಾಷ್ಟ್ರಗಳು ಇವರ ವಾದದ ಪ್ರಕಾರ ನ್ಯಾಯವಾಗಿ ಈ 'ಇಲ್ಲದ' ರಾಷ್ಟ್ರಗಳನ್ನು 'ಇರುವ' ರಾಷ್ಟ್ರಗಳನ್ನಾಗಿ (ಅಂದರೆ ಸ್ವತಂತ್ರವಾಗಿ) ಮಾಡಿದರೆ ಮತ್ತು ಅವುಗಳಿಂದ ಅಗತ್ಯಕರವಾದ ಸೂರೆಯನ್ನು ನಿಲ್ಲಿಸಿದರೆ ಮಾತ್ರ ಯುದ್ಧ ನಿವಾರಿಸಲ್ಪಡುವುದು.

ಮುಖ್ಯ ಕಾರಣ.

ಅನೇಕರು ಈ ಸಮಸ್ಯೆಯ ನಿಜವಾದ ಕಾರಣವನ್ನರಿತಿರುವದಿಲ್ಲ. ಒಲಾಢ್ಯ ರಾಷ್ಟ್ರಗಳಲ್ಲಿ ಸಮೃದ್ಧತೆಯನ್ನು ತಂದರೆ ಯುದ್ಧ ನಿವಾರಣೆಯಾಗಿ ಶಾಂತಿಯುಂಟಾಗುವದೆಂದು ಭಾವಿಸುವರು. ಆದರೆ ಸಮೃದ್ಧತ್ವವು ಅದಲ್ಲ. ಪ್ರಪಂಚದಲ್ಲಿ ಒಲಾಢ್ಯ ರಾಷ್ಟ್ರಗಳಿಂದ ತುಳಿಯಲ್ಪಟ್ಟು ಸೂರೆಗೊಳ್ಳಲ್ಪಡುತ್ತಿರುವ ರಾಷ್ಟ್ರಗಳನ್ನು ಸಮೃದ್ಧತ್ವಕ್ಕೆ ತಂದ ನಂತರ ನಿಜವಾದ ಶಾಂತಿಯುಂಟಾಗುವುದು. ಈ ರಾಷ್ಟ್ರಗಳಿಂದ ಆಗುತ್ತಲಿರುವ ಸೂರೆಯೇ ಇಂದಿನ ಯುದ್ಧ ಪ್ರೀಯತೆಗೆ ಕಾರಣ. ಇದು ಒಂದೇ ಒಂದು ರಾಜಕೀಯ ಪೂರ್ವಾಟಿನಿಂದ ಸುಧಾರಿಸಕ್ಕಾಗುವಲ್ಲ. ಇದಕ್ಕೆ ಸಮೂಲ ಸುಧಾರಣೆಯೂ ಮತ್ತು ಮನಸ್ಸಿನ ಪೂರ್ವಾಟೂ ಆಗಬೇಕು. ಇದಕ್ಕೆ ಪ್ರಪಂಚದ ಎಲ್ಲಾ ಕಡೆಗಳಿಂದ ಪ್ರತಿನಿಧಿಗಳ ಒಂದು ಪರಿಷತ್ತನ್ನು ಸೇರಿಸಿ ಆಮೂಲಕ ಜನರ ಮನೋಭಾವವನ್ನು ಬದಲಾಯಿಸಲಿವ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಕೆಲವರ ಅಭಿಪ್ರಾಯ. ಆದರೆ ಈ ವಿಷಯಕ್ಕೆ ಎಲ್ಲರೂ ಒಪ್ಪಲಾರರು. ಯಾತಕ್ಕೆಂದರೆ ಈಗಿನ ಸ್ಥಿತಿಯು ವಿಷಮ ಪರಿಸ್ಥಿತಿಯನ್ನು ವಿವರಿಸಿ ಮುಂದಕ್ಕಾಗಬಹುದಾದ ಸುಸ್ಥಿತಿಯನ್ನು ಮನ ಮುಟ್ಟಿಸಿ ಹಲ ಕೆಲವು ವ್ಯಕ್ತಿಗಳ ಮನೋಭಾವವನ್ನು ನಾವು ಬದಲಾಯಿಸಬಹುದು ಆದರೆ ಇಂದಿನ ಸಮಯದಲ್ಲಿ ಈಗಿನ ಸಮೂಹದ ದುಸ್ಥಿತಿಯಲ್ಲಿ ಲಾಭವನ್ನು ಪಡೆಯುತ್ತಲಿರುವ ಅನೇಕ ಕೂಟಗಳ ಮನೋಭಾವವನ್ನು ಪೂರ್ವಾಪರಿಸಲಿಕ್ಕಾಗುವದಿಲ್ಲ. ಉದಾಹರಣೆಗಾಗಿ ಹಿಂದೂ ದೇಶದೊಳಗೆ ಸಮೃದ್ಧತೆಯನ್ನಾಗಲೀ, ಸಮೃದ್ಧತ್ವವಾದವನ್ನಾಗಲೀ ತರಬೇಕೆಂದಾದರೆ ಹಲ ಕೆಲವು ಧನಿಕರು ಒಪ್ಪಿದರೂ ಕೂಡ ಸಾವುಂತ ಅರಸರ ದೊಡ್ಡ ಭಂಡವಾಳಗಾರರ ಕೂಟವು ಇದಕ್ಕೆ ಸಮ್ಮತಿಸುವಂತಿಲ್ಲ. ಈ ಕೂಟದಿಂದ ಕೆಲವು ವ್ಯಕ್ತಿಗಳನ್ನು ದಾರಿಗೆ ತಂದರೂ ಇದರಿಂದ ಈ ಕೂಟಗಳು ಇಂಥ ಒಂದು ಬದಲಾವಣೆಗೆ ದೊಡ್ಡ ಕಂಟಕಗಳಾಗುವವು. ಆದ್ದರಿಂದ ಬರೇ ಮನೋಭಾವನೆಯನ್ನು ಬದಲಾಯಿಸಲು ಪ್ರಯತ್ನಪಡುವುದರಿಂದ ಹೆಚ್ಚಿನ ಪ್ರಯೋಜನವಾಗದು. ಇದರೊಡನೆ ಬಲತ್ಕಾರ ಪಡಿಸುವ ಒಂದು ಯೋಜನೆಯೂ ಬೇಕು. ಬಲತ್ಕಾರಪಡಿಸದಿದ್ದಲ್ಲಿ ಇಂಥಾ ಕೂಟಗಳನ್ನು ದಾರಿಗೆ ತರಲಾಗುವುದಿಲ್ಲ.

ಇದಕ್ಕೆ ಒಂದೇ ಮಾರ್ಗ.

ಬಲತ್ಕಾರಪಡಿಸುವ ಯೋಜನೆಯನ್ನು ಹೂಡುವಾಗ ಮನೋಭಾವವನ್ನು ಬದಲಾಯಿಸುವ ಕಾರ್ಯಕ್ಕೆ ಅಡಚಣೆಯಾಗುವುದು. ಇವೆಂಡನ್ನೂ ಏಕ ಕಾಲದಲ್ಲಿ ಸಾಂಗವಾಗಿ ನಡೆಸಲಾಗುವ ಏಕ ಮಾತ್ರ ಸಲಹೆ ಇರುವುದು. ಅದೇ ಮಹಾತ್ಮ ಗಾಂಧಿಯವರ ತತ್ವ. ಅದರಿಂದಲೇ ಪ್ರಪಂಚದಲ್ಲಿರುವ ಈಗಿನ ಸುಲಿಗೆಯನ್ನು ನಿವಾರಿಸಬಹುದು. ಅದರಿಂದಲೇ ಈಗಿನ ಯುದ್ಧ ಕಾರ್ಮೋಡಗಳನ್ನು ದೂರ ಸರಿಸಿ ಶಾಂತಿ ಪ್ರಕಾಶನ್ನು ಈ ಪ್ರಪಂಚದಲ್ಲೆಲ್ಲಾ ಹರಡಲು ಸಾಧ್ಯ. ಇದರಿಂದ ಅಧಿಕಾರಮತ್ತದಲ್ಲಿರುವ ಕೂಟಗಳನ್ನು ಬಲತ್ಕಾರಪಡಿಸಲೂ ಬಹುದು; ಮತ್ತು ಜನತೆಯ ಮನೋಭಾವವನ್ನು ಪರಿವರ್ತಿಸಲೂ ಬಹುದು. ಎರಡು ದೃಷ್ಟಿಗಳಿಂದಲೂ ಜಯಪ್ರದವಾಗಬಹುದಾದ ಒಂದೇ ಒಂದು ಹಾದಿ ಇದು.

ಪ್ರಪಂಚದ ಎಲ್ಲಾ ರಾಷ್ಟ್ರಗಳ ಮುಖಂಡರು ಶಾಂತಿ ಸ್ಥಾಪನೆಗೆಂದು ಪ್ರಯತ್ನಪಡುತ್ತಿರುವ ಸಮಯದಲ್ಲೇ ಈ ರಾಷ್ಟ್ರಗಳವರು ತಮ್ಮ ವಸಾಹತುಗಳಲ್ಲಿ ಅವರ್ಣನೀಯವಾದ ಸುಲಿಗೆಯನ್ನು ಜಾರಿಯಲ್ಲಿಟ್ಟಿರುವರು. ಇದರಿಂದ ಪ್ರಪಂಚದಲ್ಲಿ ಶಾಂತಿಗೆ ಭಂಗವಲ್ಲದ ಪ್ರೋತ್ಸಾಹ ಇಲ್ಲ. ಆದ್ದರಿಂದ ಇಂಥ ಸುಲಿಗೆಯನ್ನು ನಿಲ್ಲಿಸಬೇಕು. 'ಅಹಿಂಸಾ' ಮತ್ತು 'ಅಸಹಕಾರ' ಗಳೇ ಈ ಸುಲಿಗೆಗಳನ್ನು ನಿಲ್ಲಿಸಲು ಪ್ರಯೋಗಿಸಲ್ಪಡುವ ಶಸ್ತ್ರಗಳಾಗಬೇಕು. ಈ ತತ್ವದ ಪ್ರಕಾರ ಮಾತ್ರ ವಿಶ್ವ ಶಾಂತಿ ಪ್ರಯತ್ನವು ಸಫಲತೆಯನ್ನೆ ಪಡುವದಲ್ಲದೆ ಬೇರೇ ಉಪಾಯವೇ ಇಲ್ಲ. ಈ ವಿಶ್ವ ಶಾಂತಿ ಸ್ಥಾಪನೆಗೆಂದು ಶ್ರಮ ವಹಿಸಿರುವರು ಬರೇ ಮಾತಿನಲ್ಲಿ ಕಾಲ ಎಳೆಯಬಾರದೆ ಕೂಡಲೆ ಹೆಜ್ಜೆ ಪರಿಣಾಮಕಾರಿಯೂದ ಈ ತತ್ವಗಳನ್ನು ಪ್ರಸಾರ ಮಾಡಬೇಕು.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಫಲಹಾರ ಮಂದಿರಗಳ ಅನಸ್ಥೆ.

ಅಯ್ಯಾ,

ನಮ್ಮ ದೇಶದ ಊರುಗಳಿಂದ ಹಿಡಿದು ಪಟ್ಟಣಗಳವರೆಗೂ ಸುತ್ತಾಡಿ ನೋಡಿದರೆ ದೃಷ್ಟಿಗೆ; ಆನಂದ ಭವನ, ಕೃಷ್ಣ ವಿಲಾಸ, ಕೋಮಲ ವಿಲಾಸ, ಬ್ರಾಹ್ಮಣರ ಫಲಹಾರಮಂದಿರ ಕಾಫಿ ಕ್ಲಬ್ ಮೊದಲಾದ ಇತ್ಯಾದಿ ಹೆಸರುಗಳ ಬೋರ್ಡುಗಳಿಂದ ಕಂಗೊಳಿಸುತ್ತಿರುವ ಹೊಟೇಲುಗಳೇ ಕಾಣಿಸುವವು.

ಇಂತಹ ಹೆಸರುಗಳ ಬದಲು ಬೇರೆ ಹೆಸರುಗಳನ್ನು ಹುಚ್ಚಿಕೊಂಡಿದ್ದರೆ ಯಾವ ತರಹದ ಕೊರತೆಯಿರಲಿಲ್ಲ. ಇಂತಹ ಹೆಸರು ಇಟ್ಟುಕೊಂಡು ವ್ಯಾಪಾರ ಮಾಡಲು ಘನ ಸರಕಾರದವರಿಂದ 5—6 ರೂಪಾಯಿಗಳ ಲೈಸನ್ಸಿನ ಹಕ್ಕಂ ಪಡಕೊಂಡು ಅವರ ಖಾನೂನಿಗೆ ಬದ್ಧರಾಗಿ ಅಂಗಡಿ ಇಟ್ಟು ವ್ಯಾಪಾರ ಮಾಡುವರಾಗಿರುತ್ತಾರೆ.

ಇವುಗಳ ವೇಲಿನ ಎಚ್ಚರಿಕೆಗಾಗಿ ಒಬ್ಬ ಉದ್ಯೋಗಸ್ಥರನ್ನು ಇಟ್ಟಿರುವರು ಎಂಬ ವಾರ್ತೆಯಿದೆ. ಇವರು ಸರ್ಕಾರ್‌ಕ್ಕೆಂದಾವರ್ತಿ ದಕ್ಷಿಣ ಕೊಡಗಿನ ಹೊಟೇಲುಗಳನ್ನು ಸಂದರ್ಶಿಸಿ ಅಲ್ಲಿ ನಡೆಯುವ ವಿದ್ಯಾವಕಾಶನವನ್ನು ತಿಂಡಿ ತೀರ್ಥಗಳ ಯೋಗ್ಯತೆಯನ್ನು ತಿಳಿಯುವುದು ಅವುಗಳ ಕಷ್ಟ ತರದ ಸಂಗತಿಯೆಂದೇ ನನ್ನ ಮನಸ್ಸಿಗೆ ತೋರುತ್ತದೆ ಜಿಡ್ಡಿನ ಒಂದೊಂದು ಹೊಟೇಲುಗಳನ್ನು ಪ್ರವೇಶಿಸಿ ನೋಡಿದರೆ ಆಗ ತಾನೇ ಎಲ್ಲಾ ಸಂಗತಿ ತಿಳಿಯಬಹುದು.

ತಿಂಡಿಗಳ ವಿಷ್ಟು ಹಳೆ ಪದಾರ್ಥವಾದರೂ ಅವನ್ನು ಇಂದೇ ಮಾಡಿದ್ದೆಂದು ಆ ತಿಂಡಿಗಳನ್ನು ನಮ್ಮ ಹೆತ್ತವ್ವೆಗೆ ಹೋಗುವಂತೆ ಬೋಧಿಸಿ, ಕೊಡುವ ರಾಗಿಗುತ್ತಾರೆ. ಇವನ್ನು ತಿಂದು ಕೇಳಿ ನಳುವವರು ಅವರಿಗಿಂತ ಮಹಾ ಬುದ್ಧಿಶಾಲಿಗಳಾಗಿರಬಹುದು. ತಿಂಡಿಗಳ ಮೇಲೆ ನೊಣಗಳು ಇರುವೆಗಳು ಮುತ್ತುವುದಕ್ಕೆ ಗೆನುವೇ ಇಲ್ಲ. ಎರಡು ದಿವಸದ ಹಾಲು ಆಗಿರಲಿ ಅವನ್ನು ಸಹ ಉಪಯೋಗಿಸುತ್ತಾರೆ. ಒಂದು ಪಾತ್ರೆಕ್ಕೆ ಒಂದು ಸಲ ಟೀ ಪುಡಿಯೂಗಲಿ ಕಾಫಿ ಪುಡಿಯೂಗಲಿ ಹಾಕಿದೆಯೊದರೆ ಅದನ್ನು ಅವರ ಪಾಕ ಬಂದ ವೇಲೆ ಚಲ್ಲುವ ಮನಸ್ಸೇ ಇರುವುದಿಲ್ಲ. ಮಾಡುವಂತ ತಿಂಡಿಗಳಲ್ಲಿ ನಾನು ತಾಹದ ಕೆಟ್ಟ ಪದಾರ್ಥಗಳು ಇದ್ದಲ್ಲು ಅವು ಸಹ ದುಡ್ಡಿನ ಲೆಕ್ಕಕ್ಕೆ ಜವೂ ಹೋಗುವದಾಗಿದೆ.

ಒಂದು ಪಾತ್ರದಲ್ಲಿ ನೀರು ಇಟ್ಟುಕೊಂಡು ಕುಡಿದಂಥ ಒಟ್ಟಲುಗಳನ್ನು ತಟ್ಟೆಗಳನ್ನು ನೀರಿನ ಪಾತ್ರಕ್ಕೆ ಹಾಕಿ ಅಲ್ಲಾಸಿ ವೇಲೆ ತೆಗೆದು ಬಿಟ್ಟರೆ, ಅದಕ್ಕಿಂತ ಶುಚಿಯೂ ಮತ್ತೇ ಬೇರೆ ಎಲ್ಲಿಯೂ ಇರುವುದಿಲ್ಲ. ಅಥವಾ ಯಾವುದೋ ಒಂದು ಯುಗದ ಚಿಂದಿ ಒಟ್ಟೆಯಿಂದ ಒರಸಿ ಬಿಟ್ಟರೆ ಆಯಿತು. ಕುಪ್ಪದ, ಎಣ್ಣೆಯ, ತಿಂಡಿಯ ಜಿಡ್ಡು ಹೋಗುವಂತೇ ಇಲ್ಲ; ಆ ಪಾತ್ರಗಳಲ್ಲಿ ತಿನ್ನುವವರಿಗೆ ವೈರುಲೇ ಕಾರಣವುಂಟೇ ಇಲ್ಲ. ಒಂದು ಪಕ್ಷ ಕಂಡರೂ ಅವನ್ನು ತಮ್ಮಲ್ಲೇ ಒಚ್ಚಿಟ್ಟುಕೊಂಡು ತಿಳಿದು ತಿಳಿಯದಂತೆ ಹೊಟೇಲಿನ ಯಜಮಾನರಿಗೆ ಯಾವ ತೊಂದರೆಯಾದಾಕ್ಷಿಣ್ಯವಿಂಬಲೇ ಸದ್ದಿಲ್ಲದೆ ತಮ್ಮ ಪಾತ್ರೇಟುಗಳಿಂದ ವ್ಯಸನವಿಲ್ಲದೆ ದುಡ್ಡನ್ನು ಕೊಟ್ಟು ತೆರಳುವವರಾಗುತ್ತಾರೆ. ಮನೆಯಲ್ಲಿ ಹೋಗಿ ನನಗೆ ಶರೀರಕ್ಕೆ ಸುಖವಿಲ್ಲವೆಂದು ಮನೆಯವರ ಕೂಡ ಬೈಬ್ಬೆ ಹೊಡೆಯುವರೆ ಹೊರತು ಇನ್ನು ಮುಂದಕ್ಕಾದರೂ ಇಂತಹ ಹೊಟೇಲುಗಳಲ್ಲಿ ಶುಚಿಯಿಂದ ತಿಂಡಿ ತೀರ್ಥವನ್ನು ಕೊಡುವಂತೆ ಇದರ ಮೇಲಿನ ಅಧಿಕಾರಿಗಳಿಗೆ ಪುಕಾರು ಮಾಡುವ ಧೈರ್ಯವೇ ಇಲ್ಲ.

ಈ ಪ್ರಕಾರ ಹಾನಿ ಸಂಭವವಾಗದಂತೆ ವಾರಕ್ಕೊಮ್ಮೆಯಾದರೂ ಇಂತಹ ಫಲಹಾರ ಮಂದಿರವನ್ನು ಅಜಮಾಯಿಸುತ್ತಾ ಒಡ ಜನರಾದ ನಮ್ಮ ಆರೋಗ್ಯಭಾಗ್ಯದ ಬೆಳವಣಿಗೆಗೆ ತಕ್ಕಷ್ಟು ಶ್ರದ್ಧೆ ಇಡುವಂತೆ ಘನ ಸರಕಾರದವರೂ; ನಮ್ಮಂಥವರಲ್ಲಿ ಅಧಿಕಾರಿಗಳೂ ತಕ್ಕ ಏರ್ಪಾಡೂ ಮಾಡುವರೇ?

ಬಿ. ಯಸ್. ಜಿ.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂ ಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನ್ನನ್ನು ಯಾವ ರೂಪದಲ್ಲಾ ಸೇರಿಸಿಲ್ಲ.

"ನವರತ್ನ ಅಲ್ಕಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು

ಇದರಲ್ಲಿರುವ ಔಷಧಗಳು

1. Andrographis paniculate	2. Cocculas Cordifolius
3. Berriberies Aristata	4. Vernonis Cinerarea
5. Evolvulas Alsinoides	6. Dashmoola
7. Aconitum Heterophylum	8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮವು ಔಷಧಿ. ಕ್ವಿನಿನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸಂಜೀವಿನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲು ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರು 68, ಕೊಚಿನ್.

ಸ್ಟೋಕಿಸ್ಟ್—ಎ. ಎಸ್. ಮೂಜಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ. 52—47

ಏಜೆಂಟ್—ವಿ. ಬಿ. ಕಾಮತ್, ಮೆಹದೇವಪೇಟೆ, ಮಡಿಕೇರಿ.

ನವರತ್ನ ಫಾರಿಸಿ,

ಡಾಕ್ಟರ್ ಮೇತ್ಯುಸ್ ಎಬ್ರಹಾಮ್.

ದಂತ ವೈದ್ಯರು.

ಗೀತಾಂಜಲಿ ಬಂಗ್ಲೆ.

(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು. [52—2]

ಅನೇಕ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ

ಹೊಂದಿದ

ಕರ್ಕಂಪನಿ ೧೨೫೩

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಂಚಂದ್ರು ಕರ್ಕೆ,

(52—31) ಮುತ್ತು ಕಂಪನಿ,

ಗಿರಗಾಂವ, ಮುಂಬಯಿ.

SHIKOMANI NARAYANACHARYA

Choukhamba Benares City.

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ. ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ಕಂಠಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 10ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ. 1 ಕಾಶೀ ನಕ್ಷೆ 1 ಕಾಶಿ ಪಿಕ್ಚಂಬರ ಕೆಟಲಾಗಿನೊಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯರ್,

52—36 ಚೌಖಂಬಾ ಬೆನಾರಿಸ್, (ಕಾಶೀ)

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಂಗಳ ಕೆಲಸಗಳನ್ನು ಕ್ರಮವಾಗಿ ನಡೆಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರೀದಿ ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರಿ ಒಪ್ಪಿಗೆ ಫಾರಮುಗಳೂ, ಜಾಮೀನು ಖರೀದಿ ಫಾರಮುಗಳೂ, ಸೆಕ್ಷೀರ್ ಕೇಪರ್ ಖರೀದಿ ಫಾರಮುಗಳೂ ಓವಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚು ರಿಜಿಸ್ಟರ್ ಪುಸ್ತಕಗಳೂ, ಮತ್ತು ಜೆರಾಕ್ಸ್ ಪುಸ್ತಕಗಳೂ ಸಮ್ಮರಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದಾದ ಒಂಲಿಕ್ಕೆ ಬಿಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು

ಮೇನೇಜರ್

"ಕೊಡಗು, ಲಿಮಿಟೆಡ್,"

ಮಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ-ಪೂಕನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.



Goolamhusain Allibhoy & Sons, Ltd.,

26—27 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್:

ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ಕೃಷ್ಟವು ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನವರ್ತಿ ನಂಬಿರಿ.
ಪತಿವ್ರತ್ಯರು ಮತ್ತು ವ್ಯಾಪಾರಸ್ಥರು ವಗೈರೆಯರಿಗೆ ವಿಶೇಷವಿಧ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಲಾತ ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಳ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಷನ್ ರೀತಿಯಲ್ಲಿ ಉದಾರತ್ವದಿಂದ ಕೊಡಲು ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.
ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ವಿವರಗಳಿಗೆ—ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್,
ಮಹದೇವಪೇಟೆ, ಮಡಿಕೇರಿ.

26—21

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."



ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಪೂರ್ತವಲ್ಲ; ಸಂರಕ್ಷಣೆಯನ್ನೂ ಮಾಡುತ್ತದೆ. ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ ಚರ್ಮವನ್ನು ಎಚ್ಚರಿಕೆಯಿಂದ ಸೋಡುವರೋ ಅವರೆಲ್ಲರೂ ಉಃ ಯೋಗಿಸುವುದು ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲಿ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—10 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಶೇರ್ ಬಂಡವಾಳ —	50,000— 0—0
ವಸೂಲಾದ ಶೇರ್ ಮೊಬಲಗು —	37,18)— 0—0
ಜಮೂಬಂದ ಠೇವಣಾತಿ —	25,9035—8—10
ವಸೂಲಾದ ಕ್ಷೇಮನಿಧಿ —	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಲಕ್ಕುದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರವಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟುಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಪಂದ್ಯಂಡ ಐ. ಬೆಳ್ಯಪ್ಪನವರು.

ಮ್ಯಾನೇಜರ್, ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ
ಮನೆಯಪ್ರಂಡ ಬೆಳ್ಯಪ್ಪನವರು.

ಕಾರೀಕು 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ನಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾದದ್ದಾಗಿರುತ್ತಿರಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಗೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾಗಲೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಟರ್ಸ್—
ಕ. ಟ. ಡೋಂಗರೆ ಕಂಪೆನಿ,
(52—10) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application

Head office:—
Empire of India Life Building,
BOMBAY.

52—24

Branch Office:—
152/3—Commercial Street,
BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ, ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾಮಿಗ್ರಿಯು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಷ್ಪಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ಧೃಷ್ಟಾಮೃತ

ೀಕ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಾದಿಂದ ತಯಾರಿಸಿದ ಮುಧರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣಿಗಳಿಗೆ ಉರಿ, ನಂಜಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವು ಬರುವುದು. ಇದರಿಂದ ಸಮಾಧಾನಕರವಾಗದ್ದಲ್ಲ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದಕ್ಕೆ ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಸ್ಮರಣೆ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವಿ.)

52—35 ಕೊಡಗಿನ ಏಜಂಟರು—ನಾವೆಲ್ಟಿ ಸ್ಟೋರ್ಸ್, ಮಡಿಕೇರಿ
ಬಿ. ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ
ಎ. ಎನ್. ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಭರತ್ ಬ್ರದರ್ಸ್, ಕಾರಂಗೋಡು.]

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(1874ನಲ್ಲಿ ಇಂಡಿಯಾದಲ್ಲಿ ಸ್ಥಾಪಿಸಲ್ಪಟ್ಟದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ವಾಲಿಸಿಗಳ ಪ್ರೀಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ವಾಲಿಸಿಗಳು	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮ್ಯಾನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೊಲಂಬೊ	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನಾ	ಸಿಂಗಪುರ
ಔರಂಗಾಬಾದು	ಢಾಕಾ	ಲಕ್ನೌ	ಪೂನಾ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹತಿ	ಮಂಗಳೂರು	ರಾಜಶಾಹಿ	ತಿರುವಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಂಗಿ	ವಿಶಾಖಪಟ್ಟ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು,

52—17

ಯಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

Printed & published by P I Belliappa at 'Kodagu" Press Mercara for "Kodagu" Ltd.